ಕರ್ನಾಟಕ ವಿಧಾನಸಭೆ

ಸೋಮವಾರ, ದಿನಾಂಕ: 14ನೇ ಮಾರ್ಚ್, 2011ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯರವರು

ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಸಂತಾಪ ಸೂಚನೆ :

ಮಾನ್ಯ ಸಭಾಧ್ಯಕ್ಷರು :

ವಿಧಾನ ಸಭೆಯ ಹಾಗೂ ವಿಧಾನಪರಿಷತ್ತಿನ ಮಾಜಿ ಸದಸ್ಯರು, ಮಾಜಿ ಸಚಿವರು ಮತ್ತು ಸಂಸತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಹೆಚ್.ಸಿ. ಶ್ರೀಕಂಠಯ್ಯ ಅವರು ದಿನಾಂಕ: 12.03.2011ರಂದು ನಿಧನರಾಗಿದ್ದಾರೆಂದು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ದಿವಂಗತರು 18ನೇ ಜುಲೈ 1926ರಲ್ಲಿ ಚನ್ನರಾಯಪಟ್ಟಣ ತಾಲ್ಲೂಕು ಹಿರೆಸಾವೆಯಲ್ಲಿ ಜನಿಸಿದ್ದು, ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿರುತ್ತಾರೆ. ಶ್ರೀ ಹೆಚ್.ಸಿ. ಶ್ರೀಕಂಠಯ್ಯರವರು ಮೂಲತಃ ಕೃಷಿಕರಾಗಿದ್ದರು, ಅಲ್ಲದೆ ಹಲವಾರು ಸಂಘ ಸಂಸ್ಥೆಗಳನ್ನು ಮತ್ತು ಶಿಕ್ಷಣ ಸಂಸ್ಥೆಗಳನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಸ್ಥಾಪಿಸಿದ್ದರು 1960ರಲ್ಲಿ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗುವ ಮೂಲಕ ರಾಜಕೀಯಕ್ಕೆ ಪಾದಾರ್ಪಣೆ ಮಾಡಿರುತ್ತಾರೆ.

1988–89ರವರೆಗೆ ವಿಧಾನಪರಿಷತ್ತಿನ ಸದಸ್ಯರಾಗಿ, 1989–91ರ ವರೆಗೆ ಸಂಸತ್ ಸದಸ್ಯರಾಗಿ ಮತ್ತು 1972ರಿಂದ 1985ರವರೆಗೆ ಹಾಗೂ 1999 ರಿಂದ 2004ರವರೆಗೆ ವಿಧಾನಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ದಿವಂಗತರು 1974 ರಿಂದ 1980, 1980 ರಿಂದ 1983 ಮತ್ತು 1999 ರಿಂದ 2004ರ ಅವಧಿಯಲ್ಲಿ ಹಲವಾರು ಪ್ರಮುಖ ಖಾತೆಗಳ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯರವರ ನಿಧನದಿಂದ ಒಬ್ಬ ದಕ್ಷ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಲಾಗುವುದು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಸದನದ ಬಹಳ ಹಿರಿಯ ಸದಸ್ಯರಾಗಿದ್ದ ಶ್ರೀ ಹೆಚ್.ಸಿ.ಶ್ರೀಕಂಠಯ್ಯನವರು 12ನೇ ತಾರೀಖು ನಿಧನ ಹೊಂದಿದ್ದಾರೆ. ಅವರು ವಿಧಾನಸಭೆ, ವಿಧಾನ ಪರಿಷತ್ತು ಮತ್ತು ಲೋಕಸಭೆ ಈ ಮೂರು ಸದನಗಳ ಸದಸ್ಯರಾಗಿ ಮತ್ತು ಬಹಳ ದೀರ್ಘಕಾಲದ ವಿಧಾನ ಮಂಡಲದ ನಂಟನ್ನು ಹೊಂದಿದ್ದರು. ಇದರ ಜೊತೆಗೆ ಸಚಿವರಾಗಿ ಹಲವಾರು ಖಾತೆಗಳನ್ನು ನಿಭಾಯಿಸಿದ ನಮ್ಮ ರಾಜ್ಯದ ಒಬ್ಬ ಹಿರಿಯ ರಾಜಕೀಯ ನಾಯಕರಾಗಿದ್ದ ಹೆಚ್.ಸಿ.ಶ್ರೀಕಂಠಯ್ಯನವರು ಇವತ್ತು ನಿಧನರಾಗಿರುತ್ತಾರೆ. 1999ನೇ ಇಸವಿಯಲ್ಲಿ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಆಗ ಮಾನ್ಯ ಟಿ.ಬಿ.ಜಯಚಂದ್ರರವರು ಕೃಷಿ ಸಚಿವರಾಗಿದ್ದರು. ಹೆಚ್.ಸಿ.ಶ್ರೀಕಂಠಯ್ಯನವರನ್ನು ಬಹಳ ಹತ್ತಿರದಿಂದ ನೋಡುವ ಒಂದು ಸಂದರ್ಭ ನಮಗೆ ಬಂದಿತ್ತು. ಅವರು ಕಂದಾಯ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ. ಯಾರಾದರೂ ಕೂಡ ಬಹಳ ಸಲೀಸಾಗಿ ಹೋಗಿ ಭೇಟಿ ಮಾಡಬಹುದಾದ ಒಂದು ವ್ಯಕ್ತಿತ್ವ. ಜೊತೆಗೆ ಸಾರ್ವಜನಿಕ ಬದುಕಿನಲ್ಲಿ ಅನೇಕ ಸಂಘ ಸಂಸ್ಥೆಗಳನ್ನು, ಶಿಕ್ಷಣ ಸಂಸ್ಥೆಗಳನ್ನು ಕೂಡ ಸಾರ್ವಜನಿಕರ ಒಂದು ಉಪಯೋಗಕ್ಕೋಸ್ಕರ ಸಮಾಜದಲ್ಲಿ ಪ್ರಾರಂಭಿಸಿದ್ದರು. ತಾಲ್ಲೂಕು ಬೋರ್ಡ್ ಮಟ್ಟದಿಂದ ಒಂದು ಲೋಕಸಭಾ ಸದಸ್ಯರಾಗುವ ಮಟ್ಟಕ್ಕೆ ಬೆಳೆದು ನಮ್ಮ ರಾಜ್ಯದಲ್ಲಿ ಕೂಡ ಹಲವಾರು ಖಾತೆಗಳನ್ನು ನಿಭಾಯಿಸಿದ ಒಂದು ಕೀರ್ತಿ ಹೆಚ್.ಸಿ.ಶ್ರೀಕಂಠಯ್ಯನವರಿಗೆ ಸಲ್ಲುತ್ತದೆ. ಅವರ ನಿಧನದಿಂದ ನಿಜವಾಗಲೂ ವಿಶೇಷವಾಗಿ ಹಾಸನ ರಾಜಕೀಯದಲ್ಲಿ ಒಂದು ಶಾಶ್ವತವಾದ ಒಂದು ಕೊರತೆ ಉಂಟಾಗಿರುತ್ತದೆ. ನಾವೆಲ್ಲರೂ ಕೂಡ ತಾವು ಏನು ಸಂತಾಪ ಸೂಚನೆಯನ್ನು

ಮಂಡಿಸಿರುತ್ತೀರಿ ಅದಕ್ಕೆ ನಮ್ಮ ಧ್ವನಿಯನ್ನು ಸೇರಿಸುತ್ತಾ ಮೃತರ ಕುಟುಂಬಕ್ಕೆ ಈ ಒಂದು ದು:ಖವನ್ನು ಭರಿಸುವ ಶಕ್ತಿಯನ್ನು ಕೊಡಲಿ ಮತ್ತು ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಹೇಳುತ್ತೇನೆ. ಇದೇ ಒಂದು ಸಂದರ್ಭದಲ್ಲಿ ಜಪಾನಿನಲ್ಲಿ ಏನು ಒಂದು ಸುನಾಮಿ ಮತ್ತು ಭೂಕಂಪದಿಂದ ಇಡೀ ಜಪಾನ್ ನಲುಗಿದೆ. ಪ್ರಪಂಚಕ್ಕೆ ಆಘಾತವಾಗುವ ರೀತಿಯಲ್ಲಿ ಒಂದು ದುರಂತ ಸಂಭವಿಸಿದೆ. ಸುನಾಮಿ ಮತ್ತು ಭೂಕಂಪದಿಂದ ಅದರ ಜೊತೆಗೆ ಲಕ್ಷಾಂತರ ಜನ ಏನು ನಷ್ಟ ಉಂಟಾಗಿದೆ, ಅದಕ್ಕೂ ಕೂಡ ನಾವು ನಮ್ಮ ಸಂತಾಪವನ್ನು ಸೂಚಿಸೋಣ. ಈಗಾಗಲೇ ನಮ್ಮ ಕೇಂದ್ರ ಸರ್ಕಾರ ಜಪಾನಿಗೆ ನಾವು ಪೂರ್ಣ ನೆರವನ್ನು ಕೊಡುತ್ತೇವೆ, ಅವರ ದು:ಖವನ್ನು ನಾವು ಸಹ ತೆಗೆದುಕೊಂಡು ಸಹಾಯ ಮಾಡುತ್ತೇವೆಂದು ಹೇಳಿರುತ್ತಾರೆ. ಸದನ ಈ ಸಂತಾಪ ಸೂಚನೆಯ ಜೊತೆಗೆ ಆ ಜಪಾನಿನ ದುರಂತದ ಬಗ್ಗೆ ಸಹ ನಮ್ಮ ಸಂತಾಪವನ್ನು ವ್ಯಕ್ತಪಡಿಸಿ ಅದನ್ನು ಸೇರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು. ಸೇರಿಸಿಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯವನ್ನು ನಾನೂ ಕೂಡ ಬೆಂಬಲಿಸುತ್ತೇನೆ. ಮಾನ್ಯ ಹೆಚ್.ಸಿ.ಶ್ರೀಕಂಠಯ್ಯನವರು ಕರ್ನಾಟಕ ರಾಜಕಾರಣದಲ್ಲಿ ಬಹಳ ಹಿರಿಯರಾಗಿರುವಂಥವರು ಬಹಳ very very senior politician ಅವರು ಸುಮಾರು ತಮ್ಮ 86ನೇ ವಯಸ್ಸಿನವರೆಗೆ ಬದುಕಿದ್ದರು. 2004ರವರೆಗೆ ಕೂಡ ಈ ಮನೆಯ ಸದಸ್ಯರಾಗಿದ್ದರು. ಮತ್ತೆ ಆ ಕಾಲದಲ್ಲಿ ಕಂದಾಯ ಮಂತ್ರಿಗಳಾಗಿದ್ದರು, ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದರು. ಅಲ್ಲಿಯವರೆಗೆ ಬಹಳ ದೀರ್ಘಕಾಲ ಕರ್ನಾಟಕ ರಾಜಕಾರಣದಲ್ಲಿ, ಮೇಲ್ಮನೆ ಸದಸ್ಯರಾಗಿ ನಂತರ ವಿಧಾನಸಭೆ ಸದಸ್ಯರಾಗಿ, ಸರ್ಕಾರದ ಅನೇಕ ಖಾತೆಗಳನ್ನು ನಿರ್ವಹಿಸಿ ಅಪಾರವಾದಂಥ ಅನುಭವ ಇದ್ದಂಥ ಒಬ್ಬ ರಾಜಕಾರಣಿ. ಅವರು ರಾಜಕಾರಣವನ್ನು ಅತ್ಯಂತ ಕೆಳ ಹಂತದಿಂದ ಪ್ರಾರಂಭ ಮಾಡಿರತಕ್ಕಂಥವರು. ತಾಲ್ಲೂಕು ಬೋರ್ಡ್ ಸದಸ್ಯರಾಗಿ, ಅಧ್ಯಕ್ಷರಾಗಿ, ಸಹಕಾರ ಸಂಘಗಳ ಮೂಲಕ ಮತ್ತು ಆ ಚಳುವಳಿಯಲ್ಲಿಯೂ ಸಹ ತಮ್ಮನ್ನು ಅವರು ಪೂರ್ಣವಾಗಿ

ತೊಡಗಿಸಿಕೊಂಡು ಅಲ್ಲಿಯೂ ಬಹಳ ವರ್ಷಗಳಕಾಲ ಕೆಲಸ ಮಾಡಿ ವಿಶೇಷವಾಗಿ ರೈತರ ಬಗ್ಗೆ ಅಪಾರವಾದ ಕಾಳಜಿ ಇತ್ತು. ಗ್ರಾಮೀಣ ಪ್ರದೇಶ, ರೈತರ ಅಭಿವೃದ್ಧಿ, ಕೃಷಿ ಇದರ ಬಗ್ಗೆ ಅಪಾರವಾದ ಕಾಳಜಿಯನ್ನು ಇಟ್ಟುಕೊಂಡು ಹಳ್ಳಿಗಾಡಿನ ಅಭಿವೃದ್ಧಿ ಬಗ್ಗೆ ತಮ್ಮದೇ ಆದ ಸೇವೆಯನ್ನು, ಕೊಡುಗೆಯನ್ನು, ಸಾರ್ವಜನಿಕ ಕ್ಷೇತ್ರದಲ್ಲಿ ಅವರು ಮಾಡಿರುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ಅವರ ಒಡನಾಟ ಇತ್ತು. ನಾನು ಬೈ ಎಲೆಕ್ಷನ್‌ಗೆ ನಿಂತುಕೊಂಡಾಗ ಬಹಳ ಹತ್ತಿರ ನಿಕಟ ಸಂಬಂಧವಿತ್ತು. ನಾನು ರಾಜೀನಾಮೆಯನ್ನು ಕೊಟ್ಟು ನನ್ನ ಕ್ಷೇತ್ರವಾದ ಚಾಮುಂಡೇಶ್ವರಿ ಕ್ಷೇತ್ರದಿಂದ ನಿಂತುಕೊಂಡಾಗ ಒಂದು ವಾರ ಬಂದು ಪೂರ್ತಿ ಕೆಲಸ ಮಾಡಿರುತ್ತಾರೆ. ನನ್ನ ಕ್ಷೇತ್ರದಲ್ಲಿ ಬಂದು ಪ್ರಚಾರದ ಜೊತೆಗೆ ಹಣ ಸಹಾಯ ಮಾಡಿ ಒಟ್ಟಿನಲ್ಲಿ ಎಲ್ಲಾ ರೀತಿಯ ಸಹಾಯ ನನಗೆ ಮಾಡಿದ್ದರು. ಇವತ್ತು ನನಗೆ ಜ್ಞಾಪಕ ಬರುತ್ತದೆ, ಅವರು ಒಳ್ಳೆಯ ಮನುಷ್ಯರು. ಜೊತೆಗೆ ಅಜಾತಶತ್ರು ಯಾರಿಗಾದರೂ ಸಹಾಯ ಮಾಡುತ್ತಿದ್ದರೇ ಹೊರತು ಕೆಡಕನ್ನು ಬಯಸುತ್ತಿರಲಿಲ್ಲ. ರಾಜಕಾರಣದಲ್ಲಿ ಸೇಡಿನ ರಾಜಕಾರಣ ಮಾಡುವವರು ಬಹಳ ಜನ ಇರುತ್ತಾರೆ. ಆದರೆ ಹೆಚ್.ಸಿ.ಶ್ರೀಕಂಠಯ್ಯನವರು ಅಷ್ಟೊಂದು ದೀರ್ಘಕಾಲದ ರಾಜಕಾರಣ ಮಾಡಿದರೂ ಸಹ ಹಾಸನ ಜಿಲ್ಲೆಯಲ್ಲಿ ಅವರು ಯಾವೊತ್ತು ಸೇಡಿನ ರಾಜಕಾರಣ ಮಾಡುತ್ತಿರಲಿಲ್ಲ. ವೈರಿಗಳನ್ನು ಮತ್ತು ವಿರೋಧ ಪಕ್ಷದವರನ್ನು ಕೂಡ ಪ್ರೀತಿಸುತ್ತಿದ್ದರು. ಅವರ ಮನೆಗೆ ಹೋದರೂ ಕೂಡ ಕೆಲಸ ಮಾಡಿ ಕೊಡುತ್ತಿದ್ದರು. ಆ ತರಹದ ಒಂದು ಮನೋಭಾವವನ್ನು ಆ ತರಹ ಒಂದು ಗುಣವನ್ನು ಬೆಳೆಸಿಕೊಂಡಂಥ ಒಬ್ಬ ಸಜ್ಜನ ರಾಜಕಾರಣಿ ಎಂದು ನಾನು ಅಂದುಕೊಂಡಿರುತ್ತೇನೆ. ಮಾನ್ಯ ಬಚ್ಚೇಗೌಡರೆ, ಪಾಪ, ಅವರು ಕೊನೆಯಲ್ಲಿ ಬಿಜೆಪಿ ಪಕ್ಷವನ್ನು ಸೇರಿದರು. ಆಮೇಲೆ ಏತಕ್ಕಾಗಿ ನಾನು ಆ ಪಕ್ಷವನ್ನು ಸೇರಿದೆ ಎಂದು ಪಶ್ಚಾತ್ತಾಪವನ್ನು ಪಟ್ಟುಕೊಂಡರು. ನಾನು ಪಕ್ಷವನ್ನು ಸೇರಬಾರದಾಗಿತ್ತು ಎಂದು ನನಗೆ ಅನೇಕ ಸಾರಿ ಹೇಳಿಕೊಂಡಿದ್ದರು. ಬಚ್ಚೇಗೌಡರು, ನನ್ನ friend ಅವರು ಈಗ minister ಆಗಿದ್ದಾರೆ, ಶ್ರೀಯುತರು ನಾನು ಏತಕ್ಕಾಗಿ ಈ ಪಾರ್ಟಿಗೆ ಸೇರಿದೆ ಎಂದು ಪಶ್ಚಾತ್ತಾಪವನ್ನು ಪಡುತ್ತಿದ್ದರು. ನಾನು ಕೊನೆಯ ತಪ್ಪನ್ನು ಮಾಡಿಬಿಟ್ಟೆ ಅಂತ ಹೇಳುತ್ತಿದ್ದರು. ಅದು ಏನೇ ಇರಲಿ, ಅದರ ಬಗ್ಗೆ

ಬಿಂಬಿಸುವುದಕ್ಕೆ ಹೋಗುವುದಿಲ್ಲ. ಅವರನ್ನು ಹಾಸನ ಜಿಲ್ಲೆಯಲ್ಲಿ ಹಾಗೂ ಹಿರಿಸಾವೆಯಲ್ಲಿ ಶ್ರೀಕಂಠಯ್ಯನವರು ಎಂದು ಕರೆಯುತ್ತಿರಲಿಲ್ಲ, "ಹಿರಿಸಾವೆ ಅಣ್ಣಯ್ಯ" ಎಂದು ಕರೆಯುತ್ತಿದ್ದರು. ಅವರಿಗೆ ರಾಜ್ಯದಲ್ಲಿ ಮತ್ತು ಜಿಲ್ಲೆಯಲ್ಲಿ ಆ ತರಹದ ಒಂದು ಜನಪ್ರಿಯತೆಯು ಇತ್ತು ಎನ್ನುವುದನ್ನು ಇವತ್ತು ನಾವು ನೆನೆಪಿಸಿಕೊಳ್ಳಬೇಕಾಗುತ್ತದೆ. ಅಂತಹ ಒಬ್ಬ ಅಜಾತಶತ್ರು, ದೀರ್ಘಕಾಲ ಕರ್ನಾಟಕ ರಾಜ್ಯದಲ್ಲಿ ಸೇವೆಯನ್ನು ಮಾಡಿ ಇವತ್ತು ನಮ್ಮನ್ನೆಲ್ಲಾ ಅಗಲಿದ್ದಾರೆ. ಅವರು ಕಾಂಗ್ರೆಸ್‌ನಲ್ಲಿ ಬಹಳ ವರ್ಷಗಳ ಕಾಲ ಇದ್ದರು. 1972 ರಿಂದ ಅವರು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ ಅರಸುರವರ ಕಾಲದಿಂದ ಪ್ರಾರಂಭಮಾಡಿದ್ದರು. ಅವರು 1980ರಲ್ಲಿ ಒಂದು ಸಾರಿ ಅವರಿಗೆ ಮುಖ್ಯಮಂತ್ರಿಯಾಗುವ ಅವಕಾಶವು ಸಹಾ ಬಂದಿತ್ತು. ಅವರಿಗೆ ಮುಖ್ಯಮಂತ್ರಿಯಾಗುವ ಅವಕಾಶ ಏಕೋ ತಪ್ಪಿಹೋಯಿತು ಎಂದು ನನಗೆ ಗೊತ್ತಾಗಲಿಲ್ಲ. ಆಗ ನಾನು ಜನತಾಪಕ್ಷದಲ್ಲಿದ್ದು, ವಿರೋಧಪಕ್ಷದಲ್ಲಿದ್ದೆವು. ಅದರ ಬಗ್ಗೆ ನನಗೆ ಗೊತ್ತಿಲ್ಲ. ಇವರು ಮುಖ್ಯಮಂತ್ರಿಯಾಗುತ್ತಾರೆಂದು ಇತ್ತು. ನಮ್ಮ ಜನತಾಪಾರ್ಟಿಯ ಎಂಎಲ್‌ಎಗಳು ಬಹಳ ಜನ ಅವರ ಜೊತೆಯಲ್ಲಿ ಹೋಗಿಬಿಟ್ಟರು. ಆ ಟೈಮ್‌ನಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಿಬಿಟ್ಟರು. ಆಗ ದೇವರಾಜ ಅರಸುರವರ ಒಂದು ಗುಂಪು ಹಾಗೂ ಮತ್ತೊಂದು ಗುಂಪು ಇದ್ದಾಗ ಇವರು ಒಂದು ದೊಡ್ಡ ಟೀಮ್ ಅನ್ನು ಕರೆದುಕೊಂಡು ಕಾಂಗ್ರೆಸ್‌ಗೆ ಹೊರಟು ಹೋದರು. ಅವರಿಗೆ Chief Minister ಆಗಬೇಕೆಂಬ ಅವಕಾಶ ಇತ್ತು, ಅದು ಅಗಲಿಲ್ಲ. ಅವರಿಗೆ ಆ ಒಂದು ಕೊರಗು ಇತ್ತು. ನನಗೆ ಒಂದು ಅವಕಾಶ ಸಿಕ್ಕಿದ್ದು ಅದು ತಪ್ಪಿಹೋಯಿತು ಎಂದು ಅವರು ಯಾವಾಗಲೂ ಹೇಳುತ್ತಿದ್ದರು. Anyway ಒಬ್ಬ ಒಳ್ಳೆಯ ರಾಜಕಾರಣಿಯನ್ನು, ಅಜಾತಶತ್ರುವನ್ನು ನಾವು ಕಳೆದುಕೊಂಡಿದ್ದೇವೆ. ಅಷ್ಟರಮಟ್ಟಿಗೆ ಕರ್ನಾಟಕ ರಾಜಕಾರಣಕ್ಕೆ ಅಪಾರವಾದಂತಹ ನಷ್ಟವಾಗಿದೆ. ಅವರು 86 ವರ್ಷಗಳ ಕಾಲ ಬದುಕಿ ತುಂಬು ಜೀವನವನ್ನು ನಡೆಸಿದ್ದಾರೆ. 86 ವರ್ಷಗಳ ಕಾಲ ಬದುಕುವುದು ಕಷ್ಟದ ಕೆಲಸ, ನಾವೆಲ್ಲರೂ 86 ವರ್ಷ ಇರುತ್ತೇವೋ ಅಷ್ಟು ದಿನಗಳ ಕಾಲ ಬದುಕುತ್ತೇವೋ ಏನೋ ಅದು ಗೊತ್ತಿಲ್ಲ. ಅವರು 86 ವರ್ಷ ಬದುಕಿದ್ದರು. ಅವರು 100 ವರ್ಷ ಬದುಕಬೇಕೆಂಬ ಆಸೆ ಇತ್ತು ಆದರೆ ಅದು ಆಗಲಿಲ್ಲ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಹೇಳಿ,

ಅವರಿಗೆ ದೊಡ್ಡಕುಟುಂಬ ಮತ್ತು ಸ್ನೇಹಿತರ ಬಳಗ ಇದೆ. ಅವರೆಲ್ಲರಿಗೂ ಕೂಡ ಅವರ ಸಾವಿನ ದುಃಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಕೊಡಲಿ ಎಂದು ನಾನು ಪ್ರಾರ್ಥನೆ ಮಾಡಿ ನಾನು ಮತ್ತೊಮ್ಮೆ ನಿಮ್ಮ ನಿರ್ಣಯವನ್ನು ಬೆಂಬಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಶ್ರೀಕಂಠಯ್ಯನವರು 1950ರಿಂದ ರಾಜಕೀಯವನ್ನು ಪ್ರಾರಂಭ ಮಾಡಿ ಸುಮಾರು 4 ಸಾರಿ ವಿಧಾನಸಭೆ ಸದಸ್ಯರಾಗಿ, ರಾಜ್ಯದಲ್ಲಿ ಕಂದಾಯ ಇಲಾಖೆಯ ಮಂತ್ರಿಯಾಗಿ ಹಾಗೂ ಹಲವಾರು ಇಲಾಖಾ ಮಂತ್ರಿಯಾಗಿ, ಲೋಕಸಭಾ ಸದಸ್ಯರಾಗಿದ್ದರು. ಅವರು ದಿನಾಂಕ: 12.03.2011ರಂದು ನಿಧನರಾಗಿದ್ದಾರೆ, ತಾವು ಏನು ಸಂತಾಪ ಸೂಚನಾ ನಿರ್ಣಯವನ್ನು ತಂದಿದ್ದೀರಿ, ಅದಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ. ಶ್ರೀಯುತರು 1926ರಲ್ಲಿ ಹಿರೆಸಾವೆ ಗ್ರಾಮದಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿ, ಮೂಲತಃ ಕೃಷಿಕರಾಗಿ, ಸಹಕಾರಿಗಳಾಗಿ ಮತ್ತು ಹಲವಾರು ಸಂಸ್ಥೆಗಳಲ್ಲಿ ಪ್ರಾಮಾಣಿಕವಾಗಿ ಕೆಲಸವನ್ನು ಮಾಡಿದ್ದಾರೆ. ಇವರು ಸುಮಾರು 50 ವರ್ಷಗಳ ಕಾಲ ರಾಜಕಾರಣದಲ್ಲಿದ್ದ ಹಾಸನ ಜಿಲ್ಲೆಯ ಒಬ್ಬ ಧೀಮಂತ ನಾಯಕನನ್ನು ನಮ್ಮ ಜಿಲ್ಲೆಯ ಜನರು ಕಳೆದುಕೊಂಡಿದ್ದಾರೆ. ಇವತ್ತು ಅವರ ಆತ್ಮಕ್ಕೆ ಶಾಂತಿ ಸಿಗಲೆಂಬ ಭಾವನೆಯನ್ನು ನಾನು ಸಹಾ ವ್ಯಕ್ತಪಡಿಸುತ್ತೇನೆ. ಶ್ರೀಯುತರು 1974, 1980, 1983, 1999 ಹಾಗೂ 2004ರ ಅವಧಿಯಲ್ಲಿ ಶಾಸಕರಾಗಿ ಹಾಗೂ ಹಲವಾರು ಖಾತೆಗಳ ಸಚಿವರಾಗಿ ಜಿಲ್ಲೆ ಮತ್ತು ರಾಜ್ಯದ ಜನತೆಗೆ ಅವರದೇ ಆದಂತಹ ಕೊಡುಗೆಯನ್ನು ಕೊಟ್ಟಿದ್ದಾರೆ. ಇವರು ಲೋಕಸಭಾ ಸದಸ್ಯರಾಗಿ ಹಾಗೂ ವಿಧಾನಪರಿಷತ್ತಿನ ಸದಸ್ಯರಾಗಿ, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಅವರು ಅವರದೇ ಆದಂತಹ ಯಾವುದೇ ತರಹದ ವೈರತ್ವವನ್ನು ಇಟ್ಟುಕೊಳ್ಳದೆಯೇ ಪ್ರಾಮಾಣಿಕವಾದಂತಹ ರಾಜಕಾರಣಿಯಾಗಿದ್ದರು ಎಂದು ಹೇಳಬೇಕಾಗುತ್ತದೆ. ಅವರು ಏನೇ ಇದ್ದರೂ ನೇರವಾಗಿ ಹೇಳುವಂತಹ ವ್ಯಕ್ತಿಯಾಗಿದ್ದರು. ಆ ತರಹ ಬೆಳೆಸಿಕೊಂಡ ವ್ಯಕ್ತಿಯಾಗಿದ್ದರು. ಅವರ ಆತ್ಮಕ್ಕೆ ಹಾಗೂ ಅವರ ಕುಟುಂಬಕ್ಕೆ ಈ ದುಃಖವನ್ನು ಭರಿಸುವಂತಹ ಶಕ್ತಿಯನ್ನು ದೇವರು ಕೊಡಲೆಂದು ಹೇಳಿ ತಾವು ತಂದಿರುವಂತಹ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ

ಬೆಂಬಲವನ್ನು ವ್ಯಕ್ತಪಡಿಸುತ್ತೇನೆ ಹಾಗೂ ಇದರ ಜೊತೆಗೆ ಇವತ್ತು ಜಪಾನ್ ದೇಶದಲ್ಲಿ ಸುನಾಮಿ ಹಾಗೂ ಭೂಕಂಪ ಎರಡೂ ಆಗಿದೆ. ಇವತ್ತು ಲಕ್ಷಾಂತರ ಕುಟುಂಬವು ಸಂಕಷ್ಟಕ್ಕೆ ಸಿಕ್ಕಿ ಬೀದಿ ಪಾಲಾಗಿದೆ. ಆ ದೇಶದಲ್ಲಿ ನೂರಾರು ಜನರು ಸತ್ತಿರುವುದರಿಂದ ಇಂತಹ ಒಂದು ಘಟನೆ ಆಗಬಾರದಾಗಿತ್ತು. ಅದಕ್ಕೆ ನನ್ನ ಸಂತಾಪವನ್ನು ವ್ಯಕ್ತಪಡಿಸಿ ಅದನ್ನು ತಾವು ನಿರ್ಣಯ ಮಾಡಿ ಕಳುಹಿಸಿಕೊಡಿ ಎಂದು ತಮ್ಮಲ್ಲಿ ಮನವಿಯನ್ನು ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಜಪಾನ್‌ನಲ್ಲಿ ಒಂದು ದೊಡ್ಡ ಭೂಕಂಪ ಆಗಿ ಸುನಾಮಿ ಅಲೆ ಆಗಿದೆ. ನೂರಾರು ಜನರು ಸಾವಿರಾರು ಜನರು ಸತ್ತುಹೋಗಿದ್ದಾರೆ. ಅದನ್ನು ಕೂಡ ಈ ನಿರ್ಣಯದಲ್ಲಿ ಸೇರಿಸಬೇಕು. ಅಲ್ಲಿ ಲೆಕ್ಕ ಬಂದಿರುವ ಪ್ರಕಾರ 10 ಸಾವಿರಕ್ಕೂ ಹೆಚ್ಚು ಜನರು ಸತ್ತಿದ್ದಾರೆಂದು ಬಂದಿದೆ. ದಯವಿಟ್ಟು ಅದನ್ನು ಕೂಡ ಈ ನಿರ್ಣಯದಲ್ಲಿ ಸೇರಿಸಿಕೊಳ್ಳಬೇಕೆಂದು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹೆಚ್.ಸಿ.ಶ್ರೀಕಂಠಯ್ಯನವರು ಹಿರಿಯ ರಾಜಕಾರಣಿ, ಈ ಒಂದು ವಿಧಾನಸಭೆ ಹಾಗೂ ವಿಧಾನಪರಿಷತ್ತಿನ ಸದಸ್ಯರಾಗಿ ಕೆಲಸವನ್ನು ಮಾಡಿದ್ದಾರೆ. ಲೋಕಸಭಾ ಸದಸ್ಯರಾಗಿ ಕೆಲಸವನ್ನು ಮಾಡಿದ್ದಾರೆ ಹಾಗೂ ಸಚಿವರಾಗಿ ಕೆಲವನ್ನು ಮಾಡಿದ್ದಾರೆ. ನಾನು 1999ರಲ್ಲಿ Leader of Opposition ಆಗಿ ಕೆಲಸವನ್ನು ಮಾಡುವಂತಹ ಸಂದರ್ಭದಲ್ಲಿ ಅವರು ಈ ಭಾಗದಲ್ಲಿ Revenue Minister ಆಗಿ ಕೆಲಸವನ್ನು ಮಾಡುತ್ತಿದ್ದರು. ಹೀಗಾಗಿ ನಾನು ಬಹಳ ಹತ್ತಿರದಿಂದ ಶ್ರೀಕಂಠಯ್ಯನವರನ್ನು ನೋಡಿದ್ದೇನೆ. ಒಬ್ಬ ಮುತ್ಸದ್ಧಿ ರಾಜಕಾರಣಿಯಾಗಿದ್ದರು. ಈಗಾಗಲೇ ನಮ್ಮ ಹಿರಿಯರು ಹೇಳಿದಹಾಗೆ, ಅವರು ಒಬ್ಬ ಅಜಾತಶತ್ರುವಾಗಿದ್ದರು. ನಾನು ಯಾವುದೇ ಸಂದರ್ಭದಲ್ಲಿ ನೋಡಿದ್ದೇನೆ. ಇವತ್ತು ರಾಜಕಾರಣದಲ್ಲಿ ಬಹಳಷ್ಟು ಒತ್ತಡವಿರುತ್ತದೆ. ಆ ಒತ್ತಡಕ್ಕೆ yield ಆಗುವಂತಹ ವ್ಯಕ್ತಿ ಶ್ರೀಕಂಠಯ್ಯನವರು ಆಗಿರಲಿಲ್ಲ. ಬಹಳ ಒಂದು ಶಾಂತಚಿತ್ತರಾಗಿ ಯಾವಾಗಲೂ ನಗುಮುಖದಿಂದ ಎಲ್ಲವನ್ನೂ

ಎದುರಿಸುವಂತಹ ಶಕ್ತಿ ಶ್ರೀಕಂಠಯ್ಯನವರಲ್ಲಿ ಇತ್ತು. 86 ವರ್ಷದ ತುಂಬು ಬದುಕನ್ನು ಅವರು ಕಂಡರೆಂದು ಹೇಳಬೇಕಾಗುತ್ತದೆ. ಅಂತಹ ಶ್ರೀಕಂಠಯ್ಯನವರು Revenue Minister ಇದ್ದಾಗ ಸಾಕಷ್ಟು ಉತ್ತಮವಾದಂತಹ ಕೆಲಸ ಕಾರ್ಯಗಳನ್ನು ಮಾಡಿರುವುದು ನನಗೆ ನೆನಪಿನಲ್ಲಿದೆ. ತಮ್ಮ ಇಲಾಖೆಯನ್ನು ಬಹಳ ಉತ್ತಮವಾದಂತಹ ರೀತಿಯಿಂದ ಅವರು ಆಡಳಿತವನ್ನು ನಡೆಸಿಕೊಂಡು ಹೋಗಿದ್ದು ಇವತ್ತು ನನಗೆ ನೆನಪು ಇದೆ. ಶ್ರೀಕಂಠಯ್ಯನವರಿಗೆ ಯಾರು ಏನು ಕೇಳಿದರೂ ಸಹಿತ ತಕ್ಷಣವೇ ತಮ್ಮ ಇಲಾಖೆಯ ಕೆಲಸ ಇದ್ದರೆ ಅದನ್ನು ತಕ್ಷಣ ಮಾಡಿಕೊಡುವಂತಹ ಆ ಒಂದು ರೀತಿಯ ಕ್ರಿಯಾ ಶೀಲತೆ ಇತ್ತು. 2002-03ರಲ್ಲಿ ಅವರಿಗೆ ನಮ್ಮ ಹುಬ್ಬಳ್ಳಿಯಲ್ಲಿ ನಮ್ಮ ರಾಜ್ಯ Cricket Association ನವರು ನಮ್ಮ ಹುಬ್ಬಳ್ಳಿ ನಗರದಲ್ಲಿ ಒಂದು International Standard Cricket Stadium ಕಟ್ಟುತ್ತೇವೆಂದು ಹೇಳಿ ಅವರು ಬಹಳಷ್ಟು ಪ್ರಯತ್ನವನ್ನು ಮಾಡಿದ್ದರು. ಅವತ್ತಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ಎಂ. ಕೃಷ್ಣರವರ ಹತ್ತಿರ ಹೋಗಿದ್ದರು. ಶ್ರೀಕಂಠಯ್ಯನವರ ಹತ್ತಿರ ಹೋಗಿದ್ದರು, ಅದ್ಯಾಕೋ ಸ್ವಲ್ಪ delay ಆಗುತ್ತಿತ್ತು. ಕೊನೆಗೆ ಆ Cricket Association ನವರು ನಮ್ಮ ಕಡೆಗೆ ಬಂದರು. ನೀವು ಸ್ವಲ್ಪ Revenue Minister ಹತ್ತಿರ request ಮಾಡಿ ಎಂದು ಹೇಳಿದರು. ನಾನು ಒಂದು ಸಲ ಮಾನ್ಯ ಶ್ರೀಕಂಠಯ್ಯನವರನ್ನು ಅಸೆಂಬ್ಲಿಯಲ್ಲಿ ಕಂಡು ನೋಡಿ ಹುಬ್ಬಳ್ಳಿಗೆ ಒಂದು International Cricket Stadium ಅನ್ನು ಇಲ್ಲಿ Cricket Associationನವರು ಕಟ್ಟುತ್ತಾರೆ. ಅದಕ್ಕೆ ಅಲ್ಲಿ 16 ಎಕರೆ ಜಮೀನು ಇದೆ. ಅದನ್ನು ತಕ್ಷಣ ಮಂಜೂರು ಮಾಡಿ ಎಂದು ಕೇಳಿದಾಗ ಅವರು file ಅನ್ನು immediate ಆಗಿ move ಮಾಡಿದರು. ಆಗ ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದರು. ಅವರ ಕಡೆಯಿಂದ approval ಅನ್ನು ತೆಗೆದುಕೊಂಡು cabinet ನಲ್ಲಿ subject ಇಟ್ಟು ಆ ದಿನ ಬೆಳಿಗ್ಗೆ ನನಗೆ phone ಮಾಡಿ ನೋಡಿ, ಶೆಟ್ಟರೆ, ನೀವು ಹೇಳಿದ್ದರಲ್ಲಾ ಆ ಲ್ಯಾಂಡ್ ಬಗ್ಗೆ ಇವತ್ತು ಕ್ಯಾಬಿನೆಟ್‌ಗೆ subject ಅನ್ನು ತೆಗೆದುಕೊಂಡು ಬರುತ್ತಿದ್ದು ಇವತ್ತು ಅದಕ್ಕೆ approval ಕೊಡಿಸುತ್ತಿದ್ದೇನೆ. ನಮ್ಮ ಹಾಸನಕ್ಕೆ ಒಂದು, ನಿಮ್ಮ ಹುಬ್ಬಳ್ಳಿಗೆ ಒಂದು ಮಾಡಿಸುತ್ತಿದ್ದೇನೆಂದು ಹೇಳಿದರು. ಆಗ ನಾನು ಅವರಿಗೆ thanks

ಹೇಳಿದೆ. ಅಂದರೆ ಅವರು ಯಾವುದೇ ಒಂದು ಕೆಲಸವನ್ನು ಹಿಡಿದರೆ ಅದನ್ನು ಮಾಡುವಂತಹ ಒಂದು ಕ್ರಿಯಾಶೀಲತೆಯು ಅವರಲ್ಲಿ ಇತ್ತು. ನಮ್ಮ ಹುಬ್ಬಳ್ಳಿಯಲ್ಲಿ ಆ Cricket Stadium ಇನ್ನು ಆಗಿಲ್ಲ. Cricket Associationನವರು ಅದನ್ನು ಬೇಗನೆ ಕಟ್ಟುತ್ತೇನೆಂದು ಹೇಳಿದರು, ಇನ್ನು ಅದು ಅರ್ಧಂಬರ್ಧ ಆಗಿದೆ. ಅದು complete ಆಗಿದ್ದರೆ ನಾನು ಆ ಕಾರ್ಯಕ್ರಮಕ್ಕೆ ಮಾನ್ಯ ಶ್ರೀಕಂಠಯ್ಯನವರನ್ನು ಕರೆದುಕೊಂಡು ಹೋಗಬೇಕೆಂದು ಮಾಡಿದ್ದೆ. ಆದರೆ ಇವತ್ತು ಮಾನ್ಯ ಶ್ರೀಕಂಠಯ್ಯನವರು ನಮ್ಮ ಮಧ್ಯದಲ್ಲಿ ಇಲ್ಲ. ಆದರೆ ಅವರು ಮಾಡಿರುವಂತಹ ಕೆಲಸಕಾರ್ಯಗಳು ನಮ್ಮ ಮನದಲ್ಲಿ ಯಾವಾಗಲು ಇದ್ದೇಇರುತ್ತದೆ. ಇದೇ ಒಂದು ಉದಾಹರಣೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೀಗಾಗಿ ಅಂತಹ ಒಬ್ಬ ಶ್ರೀಕಂಠಯ್ಯಯವರು ನಮ್ಮ ಮಧ್ಯದಲ್ಲಿ ಇಲ್ಲ. ಅವರ ಕೆಲಸ ಕಾರ್ಯಗಳು ನಮ್ಮ ಮನಸ್ಸಿನಲ್ಲಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಶ್ರೀಕಂಠಯ್ಯನವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಮತ್ತು ಅವರ ಸಾವಿನಿಂದ ಆಗಿರುವಂತಹ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಸಿಗಲೆಂದು ಹೇಳಿ ಆ ದೇವರಲ್ಲಿ ನಾನು ಪ್ರಾರ್ಥನೆಯನ್ನು ಮಾಡುತ್ತೇನೆ. ತಾವು ಏನು ಸಂತಾಪ ಸೂಚನೆಯನ್ನು ತಂದಿದ್ದೀರಿ, ಮಾನ್ಯ ಅಧ್ಯಕ್ಷರೆ, ಜಪಾನ್ ದೇಶ ಭೂಕಂಪ ಹಾಗೂ ಸುನಾಮಿಯಂಥ ಎರಡೂ ರೀತಿಯ ದುರಂತಗಳನ್ನು ಅನುಭವಿಸಿದೆ. ಏಕೆಂದರೆ ಜಪಾನ್ ಬಗ್ಗೆ ನಾವು ಉದಾಹರಣೆ ಕೊಡುವಂಥ ಸಂದರ್ಭದಲ್ಲಿ ಬೇರೆ ಬೇರೆ ಹಂತದಲ್ಲಿ ಒಂದು ರಾಷ್ಟ್ರಭಕ್ತಿ, ದೇಶಪ್ರೇಮದ ಬಗ್ಗೆ ಆ ಜಪಾನ್ ದೇಶದ ನಾಗರೀಕರನ್ನು ನೋಡಿ ನಾವು ಕಲಿಯಬೇಕು ಎಂದು ನಾನು ಬಹಳಷ್ಟು ಕಡೆ ಉದಾಹರಣೆಯನ್ನು ಕೊಡುತ್ತೇವೆ. ಒಂದು ಸಣ್ಣ ರಾಷ್ಟ್ರ ಎರಡನೇ ಮಹಾಯುದ್ಧದ ನಂತರ ಪೂರ್ತಿ ನಶಿಸಿ ಹೋದಂಥ ರಾಷ್ಟ್ರ ಅಂಥದ್ದು ಕೆಲವೇ ವರ್ಷಗಳಲ್ಲಿ ಇಡೀ ಒಂದು ಜಗತ್ತಿನಲ್ಲಿ number one ಸ್ಥಾನಕ್ಕೆ ಅಭಿವೃದ್ಧಿಪಡಿಸಿಕೊಂಡಂಥ ಆ ಒಂದು ಜಪಾನ್ ದೇಶಕ್ಕೆ ಇವತ್ತು ಆ ರೀತಿಯ ದುರಂತ ಸಂಭವಿಸಿ ಬಹಳಷ್ಟು ಜನ ಕಷ್ಟ ನಷ್ಟದಲ್ಲಿದ್ದಾರೆ. ಅಂಥವರ ಕಷ್ಟ ನಷ್ಟಕ್ಕೆ ನಮ್ಮ ಕೇಂದ್ರ ಸರ್ಕಾರ ಈಗಾಗಲೇ ನೆರವನ್ನು ಕೊಡುವಂಥ ಒಂದು ಹೇಳಿಕೆಯನ್ನು ಕೊಟ್ಟಿದೆ ಮತ್ತು ನೆರವನ್ನು ಕೊಡಲಿಕ್ಕೆ ಸಿದ್ಧವಾಗಿದೆ. ಹೀಗಾಗಿ ಅವರ ಒಂದು

ಕಷ್ಟಕ್ಕೆ ನಾವು ಇವತ್ತು ಮಡಿದಂಥ ವ್ಯಕ್ತಿಗಳಿಗೆ ದುಃಖವನ್ನು ಭರಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೊಡುತ್ತಿದ್ದೇವೆ. ಜಪಾನ್ ಮತ್ತೆ ಮೇಲೆದ್ದು ಬರಲಿ. ಮುಂದೆ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಯನ್ನು ಕಾಣಲಿ ಎಂದು ನಾನು ಈ ಸಂದರ್ಭದಲ್ಲಿ ಹೇಳಿ ನಾವು ತಂದಂಥ ಈ ಸಂಪಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : ಮಾನ್ಯ ಸಭಾಧ್ಯಕ್ಷರೆ, ನಿನ್ನೆ ತಾನೆ ನಿಧನರಾದಂಥ ಈ ರಾಜ್ಯದ ವಿಧಾನಸಭೆ ಮತ್ತು ವಿಧಾನಪರಿಷತ್ ಮತ್ತು ಸಂಸತ್ತಿನ ಸದಸ್ಯರಾಗಿದ್ದಂಥ ಶ್ರೀಮಾನ್ ಶ್ರೀಕಂಠಯ್ಯನವರ ನಿಧನದಿಂದ ತಂದಿರತಕ್ಕಂಥ ಸಂತಾಪ ಸೂಚನೆಗೆ ಈಗಾಗಲೇ ಎರಡೂ ಕಡೆಯವರು ಸಹ ಮಾತನಾಡಿದ್ದಾರೆ. ಅವರ ಬಗ್ಗೆ ಗುಣಗಾನವನ್ನು ಮಾಡಿದ್ದಾರೆ. ನಾನೂ ಕೂಡ ರಾಜಕೀಯವಾಗಿ ವಿಧಾನಸಭೆಗೆ ಬರುವುದಕ್ಕೆ ಮೂಲಕಾರಣರು ಎಂದು ಹೇಳಿದರೆ ಇವತ್ತು ಶ್ರೀಕಂಠಯ್ಯನವರು. 1977ನೇ ಇಸವಿಯಲ್ಲಿ ನಾನು ಲಾಯರ್ ಆಗಿದ್ದಂಥ ಸಂದರ್ಭದಲ್ಲಿ ಬಹಳ ಚುರುಕಾಗಿ ಚಟುವಟಿಕೆಯಲ್ಲಿ ಭಾಗವಹಿಸಿದ್ದನ್ನು ನೋಡಿ ನನಗೆ ಒಂದು ಮಾತನ್ನು ಹೇಳಿದರು, "ಈ ಹುಡುಗನ ಮುಖದಲ್ಲಿ ಕಳೆ ನೋಡಿ, ಈತನಿಗೆ ಶಾಸಕನಾಗುವ ಎಲ್ಲಾ ಅರ್ಹತೆಗಳಿವೆ, ಹಾಗಾಗಿ ಟಿಕೆಟ್ ಕೊಡಿಸುತ್ತೇನೆ" ಎಂದು ಹೇಳುತ್ತಲೇ ಇದ್ದರು. ಹಾಗೆಯೇ Selection Comitteeಯಲ್ಲಿ ಅವರೇ ಬಂದಾಗ ನನಗೆ ಟಿಕೆಟ್ ಕೊಡಿಸಿದರು, ನನಗೆ ಶಾಸಕನಾಗುವುದಕ್ಕೆ ಅವಕಾಶ ಸಿಕ್ಕಿತು. ಹಾಗಾಗಿ ಅವರಿಗೆ ಎಷ್ಟು ಹೃದಯ ವೈಶಾಲ್ಯತೆ ಇತ್ತು ಎಂದು ಮಾತಿನಲ್ಲಿ ಹೇಳುವುದಕ್ಕಾಗುವುದಿಲ್ಲ. ದ್ವೇಷ ಎನ್ನುವುದು ಅವರಿಗೆ ಗೊತ್ತೇ ಇರಲಿಲ್ಲ. ಅವರು ಹಾಸನ ಜಿಲ್ಲೆಯಲ್ಲಿ ಚನ್ನರಾಯಪಟ್ಟಣದಲ್ಲಿ ಬಹುಶಃ ಯಾರೂ ಕೂಡ ಮಾಡದೇ ಇರುವಂಥ ಸೇವೆಯನ್ನು ಮಾಡಿದ್ದಾರೆ. ಮನೆ ಮನೆಯಲ್ಲಿಯೂ ಕೂಡ ಉದ್ಯೋಗವನ್ನು ಕೊಡಿಸಿರುವುದು, ಪ್ರತಿಯೊಬ್ಬ ಜನರು ಅವರನ್ನು "ಅಣ್ಣಯ್ಯ" ಎಂದು ಗುರುತಿಸುವಂಥ ರೀತಿಯಲ್ಲಿ ಒಂದು ಶಾಶ್ವತವಾದಂಥ ರೀತಿಯಲ್ಲಿ ಹೆಸರು ಮಾಡಿರುವಂಥವರು. ಅಧ್ಯಕ್ಷರೆ, ಅವರು ಇಲ್ಲಿ ಕಂದಾಯ ಸಚಿವರು ಆಗಿದ್ದರು. ಕಂದಾಯ ಸಚಿವರಾಗಿರಬೇಕಾದರೆ ಶ್ರೀ ಜಗದೀಶ್ ಶೆಟ್ಟರ್ ಅವರು ವಿರೋಧ ಪಕ್ಷದ ನಾಯಕರಾಗಿದ್ದರು, ವಿರೋಧ ಪಕ್ಷದ ಸಾಲಿನಲ್ಲಿ

ಕುಳಿತಂಥ ಬಹಳಷ್ಟು ಜನ ಸದಸ್ಯರೆಲ್ಲಾ ಕೂಡ ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಒತ್ತಾಯವನ್ನು ಮಾಡುತ್ತಿದ್ದರು. ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಒತ್ತಾಯ ಮಾಡುವಂಥ ಹಿನ್ನೆಲೆಯಲ್ಲಿ ಅವರು ವಿಧಾನಸಭೆಯಲ್ಲಿ ಮಾತನಾಡಬೇಕಾದರೆ ಎಷ್ಟು ಧಾರಾಳತನವಿತ್ತು ಎನ್ನುವುದಕ್ಕೆ, "ಅದಕ್ಕೆ ಏಕೆ ಯೋಚನೆ ಮಾಡುತ್ತೀರಿ ? ಸಾಲ ಮನ್ನಾ ಮಾಡಿದರೆ ಆಯಿತು" ಎಂದು ಅವರು ಅದಕ್ಕೆ ಒಪ್ಪಿಕೊಂಡೇ ಬಿಟ್ಟರು. ಆಗ ನಾನು ಓಡಿಬಂದು ಅವರ ಪಕ್ಕದಲ್ಲಿ ನಿಂತು ಇವೆಲ್ಲಾ ವಿಧಾನಸಭೆಯಲ್ಲಿ ಒಪ್ಪಿಕೊಳ್ಳುವಂಥ ವಿಚಾರವಲ್ಲ ಎಂದು ಹೇಳಿ ಆಮೇಲೆ ಕೊನೆಗೆ ಅದನ್ನು ನಾನು ತೇಲಿಸುವಂಥ ಕೆಲಸವನ್ನು ಮಾಡಬೇಕಾಗಿ ಬಂದಿತು. ಹಾಗೆ ಅತ್ಯಂತ ಧಾರಾಳತನ ಅವರಲ್ಲಿತ್ತು, ಅವರೇ ಹೇಳುತ್ತಿದ್ದರೆಂದರೆ "ಏನಾಗುತ್ತದೆ ? ಎರಡು ಸಾವಿರ ಕೋಟಿ ಹೋದರೆ ಹೋಗುತ್ತದೆ, ಏನಂತೆ ರೈತರ ಸಾಲ ಮನ್ನಾ ಮಾಡಲಿಕ್ಕೆ ಏನು ತೊಂದರೆ?" ಎನ್ನುತ್ತಿದ್ದರು. ಆದರೆ ಅವತ್ತು ಅವರನ್ನು ವಿರೊಧ ಪಕ್ಷದವರೆಲ್ಲರೂ ಕೂಡ ಹುಯಿಲು ಎಬ್ಬಿಸುವುದಕ್ಕೆ ಪ್ರಾರಂಭ ಮಾಡಿದರೂ ಕೂಡ ಅವರ ಮನಸ್ಥಿತಿ ಅವರಿಗೆಲ್ಲರಿಗೂ ಕೂಡ ಗೊತ್ತಿದ್ದರಿಂದ ಸಮಾಧಾನವಾಗಿ ಅದು ಇತ್ಯರ್ಥವಾಯಿತು. ಆ ರೀತಿಯಾಗಿ ಧಾರಾಳ ಮನಸ್ಸಿರತಕ್ಕಂಥವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆನ್ನುವಂಥ ಒಂದು ಮಾತು. ಆದರೆ ಜೊತೆಗೆ ಎರಡು ಮೂರು ದಿವಸಗಳಿಂದ ಸತತವಾಗಿ ಭೂಕಂಪ ಮತ್ತು ಸುನಾಮಿಗೆ ಒಳಗಾಗಿರುವಂಥ ಜಪಾನ್ ದೇಶದಲ್ಲಿ ಇವತ್ತು ಹತ್ತು ಸಾವಿರಕ್ಕೂ ಹೆಚ್ಚು ಜನರು ಸತ್ತಿದ್ದರೆ ಎಂಬ ವರದಿ ಇವತ್ತು ಪತ್ರಿಕೆಯಲ್ಲಿ ಬಂದಿದೆ. ಅಧ್ಯಕ್ಷರೆ, ಹಿರೋಶಿಮಾ, ನಾಗಸಾಕಿ ಮೇಲೆ ಅವರು ಬಾಂಬ್ ಹಾಕಿದ ಮೇಲೆ ಬಹುಶಃ ಅವರಲ್ಲೇ ಇರತಕ್ಕಂಥ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ ಆ ನಾಡನ್ನು ರಕ್ಷಣೆ ಮಾಡಲಿಕ್ಕೆ ಎಲ್ಲಾ ರೀತಿಯ ಎಚ್ಚರಿಕೆಯನ್ನು ತೆಗೆದುಕೊಂಡ ದೇಶವೆಂದರೆ ಪ್ರಪಂಚದಲ್ಲೇ ಜಪಾನ್ ದೇಶ. ಬಹುಶಃ ಅವರ ಎಲ್ಲಾ ಆರ್ಥಿಕ ಚಟುವಟಿಕೆಗೆ ಮೂಲವೆಂದರೆ ವಿದ್ಯುಚ್ಛಕ್ತಿ. ಇವತ್ತು nuclear energy ಅನ್ನು harness ಮಾಡಿ ಏನೆಲ್ಲಾ ಸಾಧನೆಯನ್ನು ಮಾಡಿರತಕ್ಕಂಥ ದೇಶ ಇವತ್ತು ಈ ಪರಿಸ್ಥಿತಿಗೆ ಬಂದಿದೆ. ಇವತ್ತು ಪತ್ರಿಕೆಯಲ್ಲಿ ಬಂದಿರುವ ವರದಿ ಪ್ರಕಾರ reactors ಕೂಡ ಒಡೆದು ಹೋಗಿ ಅದರ waves ಏನಾದರೂ ಹೊರಗೆ

ಬಂದರೆ ರಷ್ಯಾದಲ್ಲಿ ಆದಂಥ "Cherno Bile" ಅನ್ನು ಕೂಡ ಮೀರಿಸುತ್ತದೆ. ಈಗಾಗಲೇ ಮೂರುವರೆ ಲಕ್ಷ ಜನರನ್ನು ಸ್ಥಳಾಂತರಿಸಿದ್ದಾರೆ. ಸುಮಾರು ನೂರಾರು ಕಿ.ಮೀ.ವರೆಗೆ ಕೂಡ ಅದರ waves ಏನಾದರೂ ಬಂದರೆ ಜೀವಕ್ಕೆ ದೊಡ್ಡ ಶಾಪವಾಗುತ್ತದೆ. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ ಅವರ ದುಃಖದಲ್ಲಿ ನಾವು ಕೂಡ ಭಾಗಿಗಳಾಗುವುದರ ಜೊತೆಗೆ ಇವತ್ತು ನಮ್ಮ ದೇಶವೂ ಕೂಡ nuclear Energy ಅನ್ನು harness ಮಾಡಲಿಕ್ಕೆ ಹೊರಟಿರಬೇಕಾದಾಗ ಕೈಗಾ ಎನ್ನುವಂಥ ಕಡೆಯಲ್ಲಿ ನಾವು ಅದಕ್ಕೆ capacity ಅನ್ನು increase ಮಾಡುವಂಥ ಸಂದರ್ಭದಲ್ಲಿ ಬಹುಶಃ ಯಾವರೀತಿಯಾಗಿ ಜಪಾನ್ ದೇಶ ಇವತ್ತು ಕುಸಿದಿದೆ, ತಂತ್ರಜ್ಞಾನದಲ್ಲಿ ಮುಂದಿದ್ದರೂ ಕೂಡ ಎಲ್ಲೋ ಒಂದು ಕಡೆ ರಕ್ಷಣೆ ಮಾಡುವುದಕ್ಕೆ ಕುಸಿದಿರುವಂಥ ಸಂದರ್ಭದಲ್ಲಿ ಅದೊಂದು ಎಚ್ಚರಿಕೆ ಗಂಟೆಯಾಗಿ ಇವತ್ತು ನಾವು ಪಾಠವನ್ನು ಕಲಿಯಬೇಕಾಗುತ್ತದೆ. ತಾವು ಅಧ್ಯಕ್ಷರೂ ಸಹ ಸರ್ಕಾರಕ್ಕೆ ಈ ಬಗ್ಗೆ ಸ್ವಲ್ಪ ಎಚ್ಚರಿಕೆಯನ್ನು ಕೊಡುವಂಥ ಕೆಲಸವನ್ನು ಮಾಡುವುದು ಒಳ್ಳೆಯದು ಎಂಬ ಮಾತನ್ನು ಹೇಳಿ ಅವರ ದುಃಖದಲ್ಲಿ ನಾವು ಕೂಡ ಭಾಗಿಯಾಗುತ್ತೇವೆ ಎಂಬಿ ಮಾತನ್ನು ಈ ಸಂದರ್ಭದಲ್ಲಿ ಹೇಳಿ ತಾವು ತಂದಿರತಕ್ಕಂಥ ಸಂತಾಪ ಸೂಚನೆಗೆ ಬೆಂಬಲವನ್ನು ವ್ಯಕ್ತಿಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಸೋಮಣ್ಣ (ವಸತಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಹಿರಿಯರು ಮತ್ತು ಈ ರಾಜ್ಯ ಕಂಡ ಒಬ್ಬ ಅಪರೂಪದ ರಾಜಕಾರಣಿಯಾಗಿದ್ದ ದಿವಂಗತ ಶ್ರೀ ಕಂಠಯ್ಯನವರು ದಿನಾಂಕಃ 12.3.2011 ರಂದು ನಿಧನರಾಗಿದ್ದಾರೆ. ಪ್ರಾಯಶಃ 1983 ರಿಂದ ಮೊನ್ನೆಯವರೆಗೂ ನಾನೂ ಕೂಡ ಶ್ರೀಕಂಠಯ್ಯನವರನ್ನು ಬಹಳ ಹತ್ತಿರದಿಂದ ಬಲ್ಲವನಾಗಿದ್ದೆ. ವಿಶೇಷವಾಗಿ ಸಂದರ್ಭದಲ್ಲಿ ಅವರ ಭಾವನೆ, ಹಳ್ಳಿಗಾಗಿನ ಜನರ ಜೀವನದ ಮಟ್ಟದಲ್ಲಿ ಅವರ ನಡವಳಿಕೆ ಮುಂದಿನ ಪೀಳಿಗೆಗೆ ಆದರ್ಶವಾಗಿರುತ್ತದೆ ಎನ್ನುವುದಕ್ಕೆ ಹತ್ತು ಹಲವಾರು ಉದಾಹರಣೆಗಳು ನನ್ನ ಕಣ್ಣು ಮುಂದೆ ಇವೆ. ಇಲ್ಲಿ ಎಲ್ಲಾ ಹಿರಿಯ ಸದಸ್ಯರು ಹೇಳಿದ ಹಾಗೆ ಶ್ರೀ ಶ್ರೀಕಂಠಯ್ಯನವರು ಅಜಾತಶತ್ರುವಾಗಿ ರಾಜ್ಯ ಕಂಡ ಒಬ್ಬ ಅಪರೂಪದ ರಾಜಕಾರಣಿ. ತಮ್ಮದೇ ಆದಂಥ ದೃಷ್ಟಿಕೋನವುಳ್ಳವರಾಗಿ ರಾಜ್ಯದ ಅಭಿವೃದ್ಧಿಯಲ್ಲಿ ವಿಶೇಷವಾಗಿ

ಹಾಸನ ಜಿಲ್ಲೆಯ ಪ್ರತಿಷ್ಠೆಗೆ ಸಾಕಷ್ಟು ಒತ್ತನ್ನು ಕೊಟ್ಟಿರತಕ್ಕಂಥವರಲ್ಲಿ ಶ್ರೀಕಂಠಯ್ಯನವರು ಸಹ ಮೊದಲಿಗರು ಎಂದರೆ ಅದು ಅತಿಶಯೋಕ್ತಿ ಅಲ್ಲ. 86 ವರ್ಷಗಳನ್ನು ಪೂರೈಸಿ 87ನೇ ವರ್ಷದ ತಮ್ಮ ಹುಟ್ಟುಹಬ್ಬವನ್ನು ಆಚರಣೆ ಮಾಡುವ ಸಂದರ್ಭದಲ್ಲಿಯೂ ಕೂಡ ಇಷ್ಟು sudden ಆಗಿ ಈ ಲೋಕವನ್ನು ತಾವು ತ್ಯಜಿಸುತ್ತೇವೆಂಬ ಭಾವನೆ ಅವರಲ್ಲಿರಲಿಲ್ಲ. ಅವರಲ್ಲಿದ್ದಂಥ ಭಾವನೆಗಳು, ಚಿಂತನೆಗಳು ಪ್ರಾಯಶಃ ನಾನು ಕೂಡ ಅವರನ್ನು ಸಾಕಷ್ಟು ಹತ್ತಿರದಿಂದ ನೋಡಿರುವುದರಿಂದ 1983ರಲ್ಲಿ ನಾನು ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯನಾಗಿ ಚುನಾವಣೆಗೆ ನಿಂತಂಥ ಸಂದರ್ಭದಲ್ಲಿ ಆದಿ ಚುಂಚನಗಿರಿ ಮಹಾಸಂಸ್ಥಾನದಲ್ಲಿ ಒಂದು ಕಾರ್ಯಕ್ರಮ ನಡೆಯುತ್ತಿತ್ತು. ಆ ಕಾರ್ಯಕ್ರಮದಲ್ಲಿ ಶ್ರೀಕಂಠಯ್ಯನವರು ನಾನು, ಪೂಜ್ಯ ಸ್ವಾಮೀಜಿಗಳು ಸಾವಿರಾರು ಜನರು ಇದ್ದರು. ನಾನು ಅವತ್ತು ಜನತಾ ಪಕ್ಷದ ಅಭ್ಯರ್ಥಿಯಾಗಿದ್ದಂಥ ಸಂದರ್ಭದಲ್ಲಿ ಶ್ರೀಕಂಠಯ್ಯನವರು ಮಾತನಾಡುತ್ತಾ ಒಂದು ಮಾತು ಹೇಳಿದರು. "ಸೋಮಣ್ಣನವರು ನಮ್ಮ ಮಠಕ್ಕೆ ತುಂಬಾ ಹತ್ತಿರದಿಂದ ಭಕ್ತರಾಗಿದ್ದಾರೆ, ಅಂಥವರ ಬೆಳವಣಿಗೆ ಅವಶ್ಯಕತೆ ಎಂಬುವ ಮಾತನ್ನು ಪದೇ ಪದೇ ನಾನು ಹೋದಂಥ ಸಂದರ್ಭದಲ್ಲಿ ಜ್ಞಾಪಕ ಮಾಡುತ್ತಿದ್ದರು. ಸನ್ಮಾನ್ಯ ಅಧ್ಯಕ್ಷರೆ, 1990 ರಲ್ಲಿ ಈ ರಾಷ್ಟ್ರದಲ್ಲಿ ನಡೆದಂಥ ಲೋಕಸಭಾ ಚುನಾವಣೆಯಲ್ಲಿ ಅಂದು ನಮ್ಮ ಪಕ್ಷದ ಅಭ್ಯರ್ಥಿಯಾಗಿದ್ದಂಥ ರಾಷ್ಟ್ರದ ಮಾಜಿ ಪ್ರಧಾನಿಗಳಾಗಿದ್ದಂಥ ಶ್ರೀ ದೇವೇಗೌಡರ ಪರವಾಗಿ ನಾನು ಸಕಲೇಶಪುರದಲ್ಲಿ ಸುಮಾರು 25 ದಿವಸಗಳ ಕಾಲ ಚುನಾವಣೆಯಲ್ಲಿದ್ದೇನು. ಆಗ ಸಕ್ರಿಯವಾಗಿ ಪಾಲ್ಗೊಂಡ ಸಂದರ್ಭದಲ್ಲಿ ಅಲ್ಲಿಯ ಪುರಸಭೆಯ ಅಧ್ಯಕ್ಷರು ಕಾಂಗ್ರೆಸ್‌ನವರಿದ್ದರು. ನಾನು ಜನತಾ ಪಕ್ಷದ ಒಬ್ಬ ಸದಸ್ಯನಾಗಿ, ಮಹಾನಗರ ಪಾಲಿಕೆಯ ಸದಸ್ಯನಾಗಿದ್ದೇನು. ನಾನು ಕಾಂಗ್ರೆಸ್‌ನವರ ಮನೆಯಲ್ಲೇ ವಾಸ ಮಾಡುವಾಗ ಅವರು ಬಂದು ಶ್ರೀಕಂಠಯ್ಯನವರಿಗೆ ಹೇಳಿದ್ದಾರೆ. ನಮ್ಮ ಮನೆಗೆ ಸೋಮಣ್ಣನವರು ಬಂದಿದ್ದಾರೆ, ನನಗೆ ತುಂಬಾ ಬೇಕಾದಂಥ ಸ್ನೇಹಿತರು, ನಾನು ಏನು ಮಾಡಲಿ, ಮನೆಯಿಂದ ಹೋಗಬೇಡಿ ಎಂದರೆ ತಪ್ಪು ತಿಳಿದುಕೊಳ್ಳುತ್ತಾರೆ ಎಂದಾಗ ಶ್ರೀಕಂಠಯ್ಯನವರು ನನ್ನನ್ನೇ ಕರೆಸಿ "ಅದೇನಯ್ಯ, ಬೆಂಗಳೂರಿನಿಂದ ಬಂದಿರುವಿಯಂತೆ, ಆ ದೇವೇಗೌಡರ ಕೆಲಸಕ್ಕೆ, ನೀನು ನಮ್ಮ ಪಾರ್ಟಿಯವರ ಮನೆಯಲ್ಲಿಯೇ

ಇರುವೆ, ನನಗೇನೂ ತೊಂದರೆಯಿಲ್ಲಪ್ಪಾ, ಅವರ ಮನೆಯಲ್ಲಿ ಇದ್ದುಕೊಂಡು ಚುನಾವಣೆ ಮಾಡು. ಆದರೆ ಒಂದು ಚುನಾವಣೆ ಆದ ಮೇಲೆ ಅವರು ಸೋಲನ್ನು ಅಪ್ಪಿದ ಮೇಲೆ ನಾನು ಅವರನ್ನು ಭೇಟಿ ಮಾಡಿದಾಗ ಅವರು ನನಗೆ ಒಂದು ಮಾತನ್ನು ಹೇಳಿದರು. "ಸೋಲು ಗೆಲುವು ಎನ್ನುವುದು ಒಂದು ನಾಣ್ಯದ ಎರಡು ಮುಖ." ನೀನು ನಿಮ್ಮ ಪಕ್ಷದ ನಿಮ್ಮ ನಾಯಕರ ಪರವಾಗಿ ಬಂದೆ, ಆದರೆ ನಮ್ಮ ಪಕ್ಷದವರ ಜೊತೆಯಲ್ಲಿ ಊಟ ಮಾಡಿಕೊಂಡು, ಅಲ್ಲಿಯೇ ಮಲಗಿದ್ದು ಚುನಾವಣೆ ಮಾಡಿ ನಮ್ಮನ್ನೇ ಸೋಲಿಸಿದ್ದೀಯ, ಇನ್ನು ಮುಂದೆಯೂ ಕೂಡ ಈ ರೀತಿ ಕೆಲಸವನ್ನು ಮಾಡಬೇಡ ಎನ್ನುವ ದೊಡ್ಡ ಮಾತನ್ನು ಹೇಳಿದಂಥ ಸಂದರ್ಭವನ್ನು ನಿಜವಾಗಿಯೂ ನಾವೆಲ್ಲರೂ ಮೆಚ್ಚಿಕೊಳ್ಳಬೇಕಾಗುತ್ತದೆ. ಅವರ ನಡವಳಿಕೆಗಿಂತ ಹೆಚ್ಚಾಗಿ ಇತ್ತೀಚೆಗೆ ಸುಮಾರು ಐದಾರು ವರ್ಷಗಳಿಂದೀಚೆಗೆ ನಾನೂ ಕೂಡ ತುಂಬಾ ಹತ್ತಿರದಿಂದ ಶ್ರೀಕಂಠಯ್ಯನವರನ್ನು ಬಲ್ಲವನಾಗಿದ್ದೇನೆ. ಕಂದಾಯ ಸಚಿವರಾಗಿದ್ದಂಥ ಸಂದರ್ಭದಲ್ಲಿ ಯಾವುದೇ ಮಠಗಳಿಗೆ ಹೋಗಲಿ, ಸಂಘಸಂಸ್ಥೆಗಳಿಗೆ ಹೋಗಲಿ, ಯಾರಾದರೂ ಬಡವರು ಹೋಗಿ ಇಂಥ ಸಹಾಯ ಮಾಡಬೇಕೆಂದರೆ ಅವರ ಭಾಷೆ, ಹಳ್ಳಿಗಾಗಿನ ಸೊಗಡನ್ನು ಮೈಗೂಡಿಸಿಕೊಂಡಿರುವ ಅವರ ಸಮಯ ಪ್ರಜ್ಞೆ ಮುಂದಿನ ಪೀಳಿಗೆಗೆ ಅವಶ್ಯಕವಿದೆ ಎಂಬುದು ನನ್ನ ಭಾವನೆಯಾಗಿದೆ. ನಿನ್ನೆ ತಾನೆ ಅವರ ಶವಸಂಸ್ಕಾರಕ್ಕೆ ಅಂತಿಮ ನಮನ ಸಲ್ಲಿಸುವುದಕ್ಕೆ ನಾನು ಕೂಡ ಚೆನ್ನರಾಯಪಟ್ಟಣಕ್ಕೆ ಹೋದಾಗ ಅಲ್ಲಿನ ಜನರ ಭಾವನೆ, ಅವರ ನಡವಳಿಕೆ, ಪಕ್ಷಾತೀತವಾಗಿ ಜನ ಮಾತನಾಡುತ್ತಿರುವುದನ್ನು ನೋಡಿದಾಗ ನಮ್ಮ ಅಲ್ಲಿಯ ಶಾಸಕ ಮಿತ್ರರಾದಂತಹ ಮಾನ್ಯ ಪುಟ್ಟೇಗೌಡರು ಒಂದು ಮಾತನ್ನು ಹೇಳಿದರು. ಅವರು ಪತ್ರಿಕೆಗಳಿಗೆ ಹೇಳಿದಂತಹ ಮಾತು. ಶ್ರೀಕಂಠಯ್ಯನವರು ಹಾಗೂ ನಾವು ನಡೆದುಕೊಳ್ಳುವಂತಹ ರೀತಿಯನ್ನು ನೋಡಿದರೆ, ನಾನೇ ಏನಾದರೂ ಮಂತ್ರಿ ಅಥವಾ ಶಾಸಕನಾಗಿದ್ದರೆ ಪ್ರಾಯಶ: ಯಾರನ್ನೂ ಬಿಡುತ್ತಿರಲಿಲ್ಲ. ನಾವು ಬೇರೆ ಪಾರ್ಟಿಯವರಾಗಿ, ನಾವೆಲ್ಲಾ ಇಲ್ಲಿ ಗುತ್ತಿಗೆದಾರರಾಗಿ ಕೆಲಸ ಮಾಡಿದರೂ ಕೂಡ ಒಂದು ದಿನವೂ ಕೂಡ ಅಧಿಕಾರಿಗಳನ್ನು ಕರೆಸಿ ಇಂತಹವರಿಗೆ ತೊಂದರೆ ಕೊಡುವಂತಹದ್ದನ್ನು ಆಗಲಿ, ಇಂತಹವರಿಗೆ ಕೆಲಸ ಕೊಡಬೇಡ ಎನ್ನುವುದಾಗಲಿ, ಇಂತಹವರ

ಬೆಳವಣಿಗೆಯಲ್ಲಿ ನೀವು ಅಡ್ಡಗಾಲು ಹಾಕಬೇಕು ಎನ್ನುವುದಾಗಲಿ, ಈ ರೀತಿ ಒಂದೇ ಒಂದು ಸಣ್ಣ ಶಬ್ದವನ್ನು ಕೂಡ ಹೇಳದೇ ಇರತಕ್ಕಂತಹ ಉದಾಹರಣೆ ಹೇಳಿದಾಗ ಅಲ್ಲಿದ್ದಂತಹ ಜನ ಪ್ರಾಯಶ: ಎಷ್ಟರಮಟ್ಟಿಗೆ ಆಯಿತು ಎಂದರೆ, ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀಕಂಠಯ್ಯನವರಿಗೆ ಯಾರಾದರೂ ಸಾಟಿ ಎಂದರೆ ಮಾನ್ಯ ಶ್ರೀಕಂಠಯ್ಯನವರೇ ಆಗಿದ್ದಾರೆ. ಶ್ರೀಕಂಠಯ್ಯನವರು ನಡೆದುಬಂದಂತಹ ದಾರಿಯನ್ನು ನೋಡಿದಾಗ ಎಷ್ಟರಮಟ್ಟಿಗೆ ಇಂತಹವರು ಈ ರಾಜ್ಯದಲ್ಲಿ ಇದ್ದಾರೆ ಎನ್ನುವ ಒಂದು ಭಾವನೆ ಕೂಡ ನಮ್ಮಂಥವರಿಗೆ ವ್ಯಕ್ತವಾಗುತ್ತದೆ. ಆದ್ದರಿಂದ, ಅವರ ಅನೇಕ ಆದರ್ಶಗಳು, ಅವರ ದಿನನಿತ್ಯದ ಜಂಜಾಟದ ಜೀವನ, ಅವರ ನಡವಳಿಕೆ, ಅವರ ಸ್ನೇಹಪರವಾದ, ನಿಷ್ಕಳಂಕವಾದ ಹೃದಯ ಶ್ರೀಮಂತಿಕೆ ಇವೆಲ್ಲವೂ ಕೂಡ ಮುಂದಿನ ಜೀವನಕ್ಕೆ ದಾರಿಯನ್ನು ತೋರಿಸಿದಂತಾಗುತ್ತದೆ ಎನ್ನುವ ಮಾತನ್ನು ಹೇಳಿ ಅಂತಹ ಒಬ್ಬ ಮಹನೀಯನನ್ನು ಕಳೆದುಕೊಂಡಿರುವುದು ಹಾಸನ ಜಿಲ್ಲೆ ಒಂದೇ ಅಲ್ಲ, ಕರ್ನಾಟಕಕ್ಕೂ ನಷ್ಟವಾಗಿದೆ. ಆದ್ದರಿಂದ, ನಾವು ಹಿನ್ನಡೆಯನ್ನು ಸಾಧಿಸಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರೋಣ. ಅವರ ಕುಟುಂಬಕ್ಕೆ ಇಂತಹ ನೋವನ್ನು ಭರಿಸತಕ್ಕಂತಹ ಶಕ್ತಿಯನ್ನು ಭಗವಂತ ನೀಡಿ ಆಶೀರ್ವಾದ ಮಾಡಲಿ ಎನ್ನುವ ಮಾತನ್ನು ಹೇಳುತ್ತೇನೆ.

ಪ್ರಕೃತಿ ವಿಕೋಪದಿಂದ ಆಗುವ ಒಂದು ಸಂದರ್ಭ ಸನ್ನಿವೇಶ. ಈ ರಾಷ್ಟ್ರದಲ್ಲಿ ಮನುಷ್ಯ ಎಷ್ಟೇ ದೊಡ್ಡವನಾದರೂ ಕೂಡ, ಮನುಷ್ಯನಿಗಿಂತ ದೊಡ್ಡದಾಗಿರುವಂತಹ ಒಂದು ದೊಡ್ಡ ಶಕ್ತಿ ರಾಷ್ಟ್ರದಲ್ಲಿ ವಿಶೇಷವಾಗಿ ಈ ವಿಶ್ವದ ಮೂಲೆ ಮೂಲೆಗಳಲ್ಲಿ ಇದೆ ಎನ್ನುವುದಕ್ಕೆ ಮೊನ್ನೆಯ ಜಪಾನಿನ ಒಂದು ಸುನಾಮಿ ಹಾಗೂ ಭೂಕಂಪ, ಎರಡೂ ಕೂಡ ಏಕಕಾಲದಲ್ಲಿ ಒಂದೇ ಸ್ಥಳದಲ್ಲಿ ಆಗಿರತಕ್ಕಂತಹ ಈ ದುರಂತ ವಿಶ್ವದ ಇತಿಹಾಸದಲ್ಲಿ ನನಗೆ ತಿಳಿದಮಟ್ಟಿಗೆ ಮತ್ತೊಂದು ಆಗಿಲ್ಲ ಎನ್ನುವ ಭಾವನೆ ನನ್ನದಾಗಿದೆ. ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಸಿದ್ದರಾಮಯ್ಯನವರು ಹಾಗೂ ಅನೇಕ ಮುಖಂಡರು ಹೇಳುತ್ತಿದ್ದರು, 10 ಸಾವಿರ ಜನ ಸತ್ತಿರಬಹುದು ಎನ್ನುವ ಒಂದು ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ, ಅವತ್ತು ಬಿ.ಬಿ.ಸಿ.ಯಲ್ಲಿ ಮತ್ತು ಇತರೆ ಚಾನಲ್‌ಗಳಲ್ಲಿ ಬರುತ್ತಿದ್ದುದ್ದನ್ನು ನೋಡಿದರೆ ಮನುಷ್ಯ

ಸಮುದ್ರಕ್ಕೆ ಕಟ್ಟಿರುವಂತಹ ಸೇತುವೆ ಏನಿದೆ, ಆ ಸೇತುವೆ ಪ್ರಾಯಶ: ಕೇವಲ ಕೆಲವೇ ಕೆಲವು ಸೆಕೆಂಡುಗಳಲ್ಲಿ ಎಲ್ಲವೂ ಕೂಡ ಧ್ವಂಸವಾಗಿ ಏನೂ ಇಲ್ಲ ಎನ್ನುವ ಒಂದು ಮಟ್ಟಕ್ಕೆ ಬಂದಾಗ, ಆ ಕಾರುಗಳು ಕೊಚ್ಚಿಕೊಂಡು ಹೋಗಿರುವುದು, ಮನುಷ್ಯನ ಪ್ರಯತ್ನಕ್ಕಿಂತ ಒಂದು ದೊಡ್ಡ ಪ್ರಯತ್ನ, ಒಂದು ದೊಡ್ಡ ಸಂದೇಶ ಈ ರಾಷ್ಟ್ರಕ್ಕೆ, ವಿಶ್ವಕ್ಕೆ ಇದೆ. ಅದು ಪ್ರಕೃತಿ ಮತ್ತು ದೇವರ ಒಂದು ವಿಧಿಯ ನಿಯಮ ಎನ್ನುವುದನ್ನು ಇದರಿಂದ ನಾವು ಕಲಿತುಕೊಳ್ಳಬೇಕಾಗಿದೆ. ಅಂತಹ ಸಾವಿರಾರು ಜನರ ಪ್ರಾಣವನ್ನು ಕಳೆದುಕೊಂಡಿರುವಂತಹ ಸಂದರ್ಭದಲ್ಲಿ ಏನೆಲ್ಲಾ ಆದರೂ ಕೂಡ ಆ ದೇಶದ ಪ್ರಧಾನಿಗಳನ್ನು, ಆ ದೇಶದ ನಾಯಕರನ್ನು ನಾವು ಮೆಚ್ಚಿಕೊಳ್ಳಬೇಕಾಗುತ್ತದೆ. ಇಷ್ಟೆಲ್ಲಾ ಸುನಾಮಿ ಭೂಕಂಪ ಆಗಿದ್ದರೂ ಕೂಡ ಅಲ್ಲಿನ ಅಧ್ಯಕ್ಷರು ಹೇಳುತ್ತಾರೆ, ನಮಗೆ ಏನೋ ಒಂದು ಸಣ್ಣ ತೊಂದರೆಯಾಗಿದೆ, ಅದನ್ನು ಎದುರಿಸುವಂತಹ ಶಕ್ತಿ ಈ ರಾಷ್ಟ್ರಕ್ಕಿದೆ ಎನ್ನುವ ಅವರ ದಿಟ್ಟತನದ ನಿರ್ಧಾರವನ್ನು ಕೂಡ ನಾವು ಮೆಚ್ಚಿಕೊಳ್ಳಬೇಕಾಗುತ್ತದೆ. ಇಂತಹ ಅನೇಕ ಸಂದರ್ಭಗಳಲ್ಲಿ ಪ್ರಕೃತಿಯ ವಿಕೋಪದಿಂದಾಗುವ ಅನಾಹುತವನ್ನು ನಾವು ಯಾವುದೇ ರೀತಿಯಲ್ಲಿ ವಿಶ್ಲೇಷಣೆ ಮಾಡಿದರೂ ಕೂಡ, ಮನುಷ್ಯ ಏನೆಲ್ಲಾ ಮಾಡಿದರೂ, ಚಂದ್ರ ಲೋಕಕ್ಕೆ ಹೋಗುವುದು, ಮತ್ತೊಂದು ಮಾಡುವುದು, ಇನ್ನೊಂದು ಮಾಡುವುದು ಇಂತಹ ಎಷ್ಟೆಲ್ಲಾ ಪ್ರಯತ್ನಗಳನ್ನು ಮಾಡಿದರೂ ಕೂಡ ವಿಧಿಯ ಆಟದ ಮುಂದೆ ನಮ್ಮದು ಏನೇನು ಇಲ್ಲವೆನ್ನುವುದಕ್ಕೆ ಈ ಮೊನ್ನೆಯ ಜಪಾನಿನ ಒಂದು ಸಂದೇಶ ನಮಗೆಲ್ಲರಿಗೂ ಕೂಡ ಒಂದು ದಿಕ್ಸೂಚಿಯಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಲ್ಲಿ ಆಗಿರತಕ್ಕಂತಹ ಅನಾಹುತಕ್ಕೆ ನಮ್ಮ ಕರ್ನಾಟಕ ರಾಜ್ಯವೇ ಅಲ್ಲ, ಇಡೀ ಭಾರತ ದೇಶ ಇವತ್ತು ತನ್ನ ಸಂತಾಪವನ್ನು ವ್ಯಕ್ತಪಡಿಸಿದೆ. ಅಲ್ಲಿ ಮಡಿದಂತಹ ಜನರಿಗೆ ಮತ್ತು ಅಂತಹ ಘಟನೆಗಳು ಮತ್ತೊಮ್ಮೆ ಆಗಬಾರದು ಎಂದು ಭಗವಂತನಲ್ಲಿ ನಾವು ಕೋರೋಣ.

ದಿ.ಶ್ರೀಕಂಠಯ್ಯನವರ ನಿಧನಕ್ಕೆ ಸಂತಾಪ ಸೂಚಿಸುತ್ತೇನೆ ಹಾಗೂ ಪ್ರಕೃತಿ ವಿಕೋಪದಿಂದ ಆಗಿರುವ ಕಹಿ ಘಟನೆ ಮುಂದಿನ ದಿನಗಳಲ್ಲಿ ಆಗದ ರೀತಿಯಲ್ಲಿ ಭಗವಂತನ ಆಶೀರ್ವಾದವನ್ನು ಕೋರೋಣ ಎಂದು ಹೇಳಿ

ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ಅಧ್ಯಕ್ಷರೆ, ಮಾನ್ಯ ದಿವಂಗತ ಶ್ರೀಕಂಠಯ್ಯನವರು ನಿನ್ನೆ ತಾನೇ ನಮ್ಮನ್ನು ಅಗಲಿ ಹೋಗಿದ್ದಾರೆ. ಅವರು ವಿಧಾನಸಭೆಗೆ ನಾಲ್ಕು ಬಾರಿ, ವಿಧಾನ ಪರಿಷತ್‌ಗೆ ಹಾಗೂ ಸಂಸತ್‌ಗೆ ಆಯ್ಕೆಯಾಗಿ ಅನೇಕ ಇಲಾಖೆಗಳಲ್ಲಿ ಮಂತ್ರಿಯಾಗಿ ಸೇವೆ ಸಲ್ಲಿಸಿ ಒಬ್ಬ ಜನಾನುರಾಗಿ ರಾಜಕಾರಣಿ ಎಂದು ಎಲ್ಲಾ ಭಾಗಗಳಲ್ಲೂ, ಕೇವಲ ಹಾಸನ ಜಿಲ್ಲೆಯಲ್ಲಿ ಮಾತ್ರವಲ್ಲ, ಎಲ್ಲಾ ಭಾಗಗಳಲ್ಲೂ ಅದರಲ್ಲೂ ವಿಶೇಷವಾಗಿ ನಮ್ಮ ಸಮಾಜ ಅಂದರೆ ಒಕ್ಕಲಿಗರ ಸಮಾಜಕ್ಕೆ ಅವರು ಒಂದು ರೀತಿ "ಹಿರಿಯಣ್ಣ" ಇದ್ದ ಹಾಗೆ, ಎಲ್ಲದಕ್ಕೂ ನಮ್ಮನ್ನು ಕರೆಸಿ ಏನಪ್ಪ ನೀವು ಏನು ಮಾಡುತ್ತಿದ್ದೀರಿ, ನಿಮ್ಮ ಜಿಲ್ಲೆಯವರು ನೀವೆಲ್ಲಾ ಕುಳಿತು ಮಾತನಾಡಿ, ಏನಾದರೂ ಒಂದು ಒಗ್ಗಟ್ಟಾಗಿ ಹೋಗತಕ್ಕಂತಹ ಪ್ರಯತ್ನ ಮಾಡಿ ಎಂದು ಅನೇಕ ಸಂದರ್ಭಗಳಲ್ಲಿ ನಮಗೆ ಅವರು ಸಲಹೆ–ಸೂಚನೆಗಳನ್ನು ಕೊಟ್ಟಿರುವುದನ್ನು ನಾನು ಮರೆಯುವಂತಿಲ್ಲ.

ಅವರ ಜೊತೆಯಲ್ಲಿ ಮಂತ್ರಿಯಾಗಿ ಕೆಲಸ ಮಾಡುವಂತಹ ಅವಕಾಶ ನನಗೆ ಸಿಕ್ಕಿತ್ತು. ಅವರು ಅನೇಕ ಸಂದರ್ಭಗಳಲ್ಲಿ ನಮ್ಮನ್ನೆಲ್ಲಾ ಕರೆದು, ನೀವು ಯಾವ ರೀತಿ ನೀತಿ–ನಿಯಮಗಳನ್ನು ಪಾಲನೆ ಮಾಡಬೇಕು, ಜನಸಾಮಾನ್ಯರ ಜೊತೆಯಲ್ಲಿ ಯಾವ ರೀತಿ ನೀವು ವ್ಯವಹರಿಸಬೇಕು ಮತ್ತು ಯಾವ ರೀತಿ ಸರ್ಕಾರಕ್ಕೆ ಧಕ್ಕೆ ಬರದ ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು ಎನ್ನುವ ಅನೇಕ ವಿಚಾರಗಳನ್ನು ನಮಗೆ ಅನೇಕ ಸಂದರ್ಭಗಳಲ್ಲಿ ಸಲಹೆ ಮಾಡುತ್ತಿದ್ದರು. ಜೊತೆಗೆ ಅವರು ಬಹಳ ಸರಳತೆಯಿಂದ ಕೂಡಿದ್ದರು. ಅವರ ಮನೆಯಲ್ಲಿ ಯಾರು ಹೋದರೂ ಕೂಡ, ಅವರು ಅಡುಗೆ ಮನೆಯಲ್ಲಿ ಕುಳಿತಿರಲಿ, ಊಟ ಮಾಡುತ್ತಿರಲಿ, ತಿಂಡಿ ತಿನ್ನುತ್ತಿರಲಿ, ಜೊತೆಯಲ್ಲಿ ಅವರ ಮನೆಗೆ ಬಂದವರಿಗೆಲ್ಲಾ ಅವರು ತಿಂಡಿ ಕೊಡಿಸುತ್ತಿದ್ದರು, ಅದು ಒಂದು ರೀತಿಯ ಸಂಪ್ರದಾಯ. ನಾವು ಯಾವಾಗ ಹೋದರೂ ಸಹ ಅವರ ಮನೆಯಲ್ಲಿ ಜನ ತುಂಬಿ ತುಳುಕಾಡುತ್ತಿದ್ದರು. ಆ ತರಹ ಒಂದು ದೊಡ್ಡ ವಿಶಿಷ್ಟವಾದಂತಹ ಗುಣ ಹೊಂದಿರುವಂತಹ ಹಿರಿಯಣ್ಣ ಅವರು. ಅವರು ವಿಶೇಷವಾಗಿ ನಮ್ಮ ಆದಿಚುಂಚನಗಿರಿ ಮಹಾಸಂಸ್ಥಾನ ಏನು ಇವತ್ತು

ಬೃಹದಾಕಾರವಾಗಿ ಬೆಳೆದಿದೆ, ಅದರ ಪೂಜ್ಯ ಗುರುಗಳಾದಂತಹ ನಮ್ಮ ಪೂಜ್ಯ ಬಾಲಗಂಗಾಧರನಾಥ ಸ್ವಾಮೀಜಿಯವರ ಜೊತೆಯಲ್ಲಿ ಪ್ರಾರಂಭದಲ್ಲಿ ವಿದೇಶಗಳಿಗೆ ಪ್ರವಾಸ ಮಾಡಿ ಆ ಸಂಸ್ಥೆಗೆ ನೆರವು ಕೊಡುವಂತಹ ನಿಟ್ಟಿನಲ್ಲಿ ವಿಶೇಷವಾದಂತಹ ಕಾಳಜಿಯನ್ನು ತೆಗೆದುಕೊಂಡು ಇವತ್ತು ಆ ಸಂಸ್ಥೆ ಒಂದು ಬೃಹತ್ ಸಂಸ್ಥೆಯಾಗಿ ಆದಿಚುಂಚನಗಿರಿ ಮಹಾ ಸಂಸ್ಥಾನವಾಗಿ ಬೆಳೆಯಬೇಕಾದರೆ ಅವರ ಸೇವೆ ಬಹಳಷ್ಟು ಕಾರಣಕರ್ತವಾಗಿದೆ ಎಂದು ನಾವು ಸ್ಮರಣೆ ಮಾಡಬೇಕಾಗಿದೆ. ಇವತ್ತು ನಮ್ಮನ್ನು ಅವರು ಅಗಲಿರುವುದು ಕೇವಲ ಅವರ ಕುಟುಂಬಕ್ಕಾಗಲಿ ಅಥವಾ ಬೇರೆ ಅವರ ಸಂಬಂಧಿಕರಿಗಾಗಲಿ ಅಲ್ಲ, ಇಡೀ ಸಮಾಜಕ್ಕೆ, ಇಡೀ ರಾಜ್ಯಕ್ಕೆ ಅಪಾರವಾದಂತಹ ನಷ್ಟವಾಗಿದೆ, ಆ ನಷ್ಟವನ್ನು ಭರಿಸುವಂತಹ ಶಕ್ತಿಯನ್ನು, ಅವರ ಕುಟುಂಬದ ಜನರಿಗೆ ಆ ನೋವನ್ನು ಸಹಿಸಿಕೊಳ್ಳುವಂತಹ ಶಕ್ತಿಯನ್ನು ಆ ಭಗವಂತ ಕೊಡಲಿ ಎಂದು ನಾನು ಈ ಸಂದರ್ಭದಲ್ಲಿ ಹಾರೈಸಿ, ಅವರು ನಮಗೆ ಕೊಟ್ಟಿರತಕ್ಕಂತಹ ಅನೇಕ ಮಾರ್ಗದರ್ಶಿಗಳನ್ನು ಸಾಧ್ಯವಾದ ಮಟ್ಟಿಗೆ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಹಾಗೂ ಅವರ ಅಗಲಿಕೆಯಿಂದ ಉಂಟಾಗಿರುವ ದು:ಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಭಗವಂತ ಕೊಡಲಿ ಎಂದು ಮತ್ತೊಮ್ಮೆ ಹಾರೈಸುತ್ತೇನೆ.

ಜಪಾನ್ ರಾಷ್ಟ್ರದಲ್ಲಿ ಅನಿರೀಕ್ಷಿತವಾಗಿ ಆಗಿರುವಂತಹ ಒಂದು ದೊಡ್ಡ ದುರಂತ, ಸುನಾಮಿ ಹಾಗೂ ಭೂಕಂಪ ಎರಡೂ ಕೂಡ ಒಂದೇ ಬಾರಿ ಆಗಿ ಬಹುಶ: ಇವತ್ತು ತಲ್ಲಣಗೊಂಡಿದೆ. ಜಪಾನ್ ರಾಷ್ಟ್ರದಲ್ಲಿ ಆಗಿರುವಂತಹ ದುರಂತಕ್ಕೆ ಇಡೀ ಪ್ರಪಂಚ ಇವತ್ತು ಗಾಬರಿಯಾಗಿದೆ. ಇದು ಎಲ್ಲರಿಗೂ ಎಚ್ಚರಿಕೆಯ ಘಂಟೆ ಎಂದು ನಾವು ತಿಳಿದುಕೊಳ್ಳಬೇಕಾಗಿದೆ. ಇನ್ನು ಮುಂದೆ balance ಕಳೆದುಕೊಂಡಿದೆ, imbalance ಬಹಳಷ್ಟು ಜಾಸ್ತಿಯಾಗಿದೆ. Imbalance ಆಗಿರುವುದರಿಂದ ಈ ರೀತಿ ಪ್ರಕೃತಿಯ ವಿಕೋಪಗಳು ಆಗಿಂದಾಗ್ಗೆ ಆಗುತ್ತವೆ ಎಂದು ವಿಚಾರ ಧಾರೆಗಳನ್ನು ಕಾಲ ಜ್ಞಾನದಲ್ಲೂ ಕೂಡ ಹೇಳಿದ್ದಾರೆ. ಅದರಲ್ಲೂ ಕೈವಾರದಲ್ಲಿರುವ ನಮ್ಮ ಯೋಗ ನಾರಾಯಣ ತಾತರವರು ಕಾಲ ಜ್ಞಾನ ಬರೆದಿದ್ದಾರೆ, ಅದರಲ್ಲಿ ಅವರು ಈ ವಿಚಾರಗಳನ್ನೆಲ್ಲಾ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಹೀಗೆ ಇರುವಂತಹ

ಸಂದರ್ಭದಲ್ಲಿ ಇದು ನಮ್ಮ ಮುಂದಿನ ಪೀಳಿಗೆ ಹಾಗೂ ನಮ್ಮ ಸಮಾಜಕ್ಕೆ ಇದು ಒಂದು ಎಚ್ಚರಿಕೆಯ ಘಂಟೆ. ಅಲ್ಲಿ ಆಗಿರುವಂತಹ ದೊಡ್ಡ ದುರಂತಕ್ಕೆ ನಾವೆಲ್ಲರೂ ಸಹ ಅನುಕಂಪ ತೋರಿಸುವುದು ನಮ್ಮ ಜವಾಬ್ದಾರಿ. ಆ ರಾಷ್ಟ್ರಕ್ಕೆ ಅಲ್ಲಿ ಆಗಿರುವಂತಹ ದುರಂತವನ್ನು ನಿಭಾಯಿಸುವಂತಹ ಶಕ್ತಿಯನ್ನು ಭಗವಂತ ಕೊಡಲಿ ಎಂದು ಈ ಸಂದರ್ಭದಲ್ಲಿ ನಾನು ಹಾರೈಸಿ, ಈ ಎರಡು ಘಟನೆಗಳು ಏನೆಂದರೆ, ನಮ್ಮ ಮಾನ್ಯ ಶ್ರೀಕಂಠಯ್ಯನವರು ನಮ್ಮನ್ನು ಅಗಲಿರುವುದು ಅತ್ಯಂತ ವೈಯಕ್ತಿಕವಾಗಿ ನನಗೆ ನೋವಾಗಿದೆ, ಅವರ ಆತ್ಮಕ್ಕೆ ಮತ್ತೊಮ್ಮೆ ನಾನು ಶಾಂತಿ ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ): ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಶ್ರೀಕಂಠಯ್ಯನವರು ಎಂದರೆ ಬಹುಶ: ಯಾರಿಗೂ ಗೊತ್ತಾಗುತ್ತಿರಲಿಲ್ಲ. ಅವರನ್ನು ಹಿರಿಸಾವೆ ಅಣ್ಣಯ್ಯನವರು ಎಂದರೆ ಎಲ್ಲರಿಗೂ ಗೊತ್ತಾಗುತ್ತಿತ್ತು. ಅವರು ಚುನಾವಣೆಯಲ್ಲಿ ನಿಂತು ಮಂತ್ರಿಯಾದ ಮೇಲೆ ಬಹುಶ: ಕರ್ನಾಟಕದಲ್ಲಿ, ಈಗಲೂ ನಮ್ಮಲ್ಲಿ ಶ್ರೀಕಂಠಯ್ಯನವರು ಎಂದರೆ ಗೊತ್ತಾಗುವುದಿಲ್ಲ. ಅಣ್ಣಯ್ಯನವರು ಎಂದು ಬಹಳ ಹೆಸರುವಾಸಿಯಾಗಿದ್ದರು. ಅವರು ನಮ್ಮ ಜಿಲ್ಲೆಯು ಕಂಡಂತಹ ಹಿರಿಯ ರಾಜಕಾರಣಿಗಳಲ್ಲಿ ಅವರೂ ಒಬ್ಬರು. ನಿನ್ನೆ ನಮ್ಮ ಎಲ್ಲಾ ಜಿಲ್ಲಾ ಪತ್ರಿಕೆಗಳು ಅಜಾತಶತ್ರು ಎಂದು ಬರೆದವು. ಕಾರಣ ಇಷ್ಟೆ, ಅವರು ಯಾರ ಜೊತೆಯಲ್ಲೂ ವಿರಸ ಮಾಡಿಕೊಳ್ಳುತ್ತಿರಲಿಲ್ಲ. ಎಲ್ಲರ ಜೊತೆಯಲ್ಲೂ ರಾಜಿ ಮಾಡಿಕೊಂಡು ಹೋಗುತ್ತಿದ್ದರು. ಪಕ್ಷದ ವಿಚಾರದಲ್ಲಿ ಬಹುಶ: ಅವರು ಪಕ್ಷದ ರಾಜಕಾರಣ ಎಷ್ಟೇ ಇದ್ದರೂ ಕೂಡ ವೈಯಕ್ತಿಕವಾದಂತಹ ಅಭಿಲಾಷೆಗಳಿಗೆ ಬಹಳ ಮನ್ನಣೆಯನ್ನು ಕೊಡುತ್ತಿದ್ದಂತಹ ಒಬ್ಬ ಒಳ್ಳೆಯ ರಾಜಕಾರಣಿಗಳು. ಎಲ್ಲವನ್ನೂ ಎಲ್ಲಾ ಮೂರೂ ಸಂಸತ್ತಿನಲ್ಲೂ ಅವರು ಕೆಲಸ ಮಾಡಿದ್ದಾರೆ. ಲೋಕಸಭೆಯಲ್ಲಿ ಕೆಲಸ ಮಾಡಿದ್ದಾರೆ. ಅದರ ಜೊತೆಯಲ್ಲಿ ವಿಧಾನ ಸಭೆಯಲ್ಲಿ ಸುದೀರ್ಘವಾಗಿ ಸಚಿವರಾಗಿ ಕೆಲಸ ಮಾಡಿದ್ದಾರೆ. ವಿಧಾನ ಪರಿಷತ್‌ನಲ್ಲೂ ಕೆಲಸ ಮಾಡಿದ್ದಾರೆ. ಈ ರೀತಿ ನಮ್ಮ ಜಿಲ್ಲೆಯ ಮಟ್ಟಿಗೆ ಪ್ರಾಮಾಣಿಕರಾಗಿ ಬಹಳ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬಂದಿದ್ದಾರೆ. ಈ ರೀತಿ ನಮ್ಮ ಜಿಲ್ಲೆಯ ಮಟ್ಟಿಗೆ ಪ್ರಾಮಾಣಿಕರಾಗಿ ಬಹಳ

ಒಳ್ಳೆಯ ಕೆಲಸ-ಕಾರ್ಯಗಳನ್ನು ಮಾಡಿಕೊಂಡು, ರಾಜಕೀಯದಲ್ಲಿ ಅವರೂ ಏಳು-ಬೀಳುಗಳನ್ನೂ ಕಂಡಿದ್ದಾರೆ. ಕಂಡಿದ್ದರೂ ಸಹ ಅವರು ಉತ್ತಮವಾದ ರಾಜಕಾರಣಿಗಳಾಗಿ ಈ ರಾಜ್ಯಕ್ಕೆ ಸೇವೆಯನ್ನು ಸಲ್ಲಿಸಿದ್ದಾರೆ. ಅದರ ಜೊತೆಯಲ್ಲಿ ಇವತ್ತಿನ ಇಂತಹ ಒಬ್ಬ ಮಹಾನಾಯಕರ ಸಂತಾಪ ಸೂಚನೆಯಲ್ಲಿ ನಮ್ಮ ಸಭಾನಾಯಕರು ಇದ್ದಿದ್ದರೆ ಬಹುಶ: ಒಳ್ಳೆಯದಾಗುತ್ತಿತ್ತು ಎನ್ನುವ ಭಾವನೆ ನನಗೆ ವ್ಯಕ್ತವಾಗುತ್ತಿದೆ. ಸಭಾನಾಯಕರು ಇಂದಿನ ಸಭೆಯಲ್ಲಿ ಇರಬೇಕಾಗಿತ್ತು. ಏಕೆಂದರೆ, ಕೊನೆ ಘಳಿಗೆಯಲ್ಲಿ ಅವರ ರಾಜಕೀಯ ಜೀವನದಲ್ಲಿ ನಾವು ಒಂದು ತಪ್ಪು ಮಾಡಿದ್ದೇವೆ ಎನ್ನುವ ಭಾವನೆ ಅವರ ಮನಸ್ಸಿನ ಅಂತರಾಳದಲ್ಲಿ ಕಾಡುತ್ತಿತ್ತು. ಕೊನೆಗೆ ಅದನ್ನು ತಿದ್ದಿಕೊಂಡು ಸರಿ ದಾರಿಗೆ ಬರುವಷ್ಟರಲ್ಲಿ ಆ ಭಗವಂತ ಅವರನ್ನು ಈ ಲೋಕದಿಂದಲೇ ಕರೆದುಕೊಂಡು ಬಿಟ್ಟ. ಆ ಒಂದು ಕೊರಗು ಇತ್ತು. ಆದ್ದರಿಂದ ಸಭಾ ನಾಯಕರು ಅವರ ಬಗ್ಗೆ ಈ ಸಭೆಯಲ್ಲಿ ನಾಲ್ಕು ಮೆಚ್ಚುಗೆ ಮಾತನ್ನಾಡಿದ್ದರೆ ಬಹಳ ಸಂತೋಷವಾಗುತ್ತಿತ್ತು ಎನ್ನುವ ಭಾವನೆಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಾ, ಮೃತರ ಆತ್ಮಕ್ಕೆ ಶಾಂತಿ ಹಾಗೂ ಅವರ ಕುಟುಂಬವರ್ಗದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಕೊಡಲಿ ಎಂದು ಈ ಸಂದರ್ಭದಲ್ಲಿ ಹಾರೈಸಿ, ಇವತ್ತು ವಿಶ್ವದಲ್ಲಿ ಮಾನವ ಕುಲಕ್ಕೇ ಒಂದು ಆಘಾತವನ್ನು ತಂದುಕೊಡುವ ದುರ್ಘಟನೆ ನಡೆಯುತ್ತಿದೆ. ಜಪಾನ್‌ನಲ್ಲಿ ಬಹುಶ: ಹಿಂದೆ ಒಂದು ಬಾರಿ ಈ ರೀತಿ ದುರ್ಘಟನೆ ನಡೆದು ಅವರು ಚೇತರಿಸಿಕೊಳ್ಳುವ ನಿಟ್ಟಿನಲ್ಲಿ ಇರುವ ಸಂದರ್ಭದಲ್ಲಿ ಮತ್ತೊಮ್ಮೆ ಈ ಒಂದು ಘಟನೆ ಏನು ನಡೆದಿದೆ, ನಿಜವಾಗಿಯೂ ಬಹಳ ದುರದೃಷ್ಟಕರ. ಇವತ್ತು ಆ ಜಪಾನ್ ರಾಷ್ಟ್ರಕ್ಕೆ ಆಗಿರುವ ನಷ್ಟವನ್ನು ಮಾನವ ಕುಲದಲ್ಲಿ ಎಲ್ಲರ ಒಂದು ಸಹಕಾರದಿಂದ, ಸಹಾಯತನದಿಂದ ವಿಶ್ವದಲ್ಲಿ ತುಂಬುವ ವ್ಯವಸ್ಥೆ ಆಗಲಿ ಎಂದು ನಾನು ಆ ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಾ, ಈ ಸಂತಾಪ ಸೂಚನೆ ಸಭೆಯಲ್ಲಿ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಂತಹ ಸನ್ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಹೆಚ್.ಸಿ.ಶ್ರೀಕಂಠಯ್ಯನವರು ದಿನಾಂಕ:12.3.2011

ರಂದು ಮೊನ್ನೆ ದಿವಸ ನಿಧನರಾದರು. ಈ ರಾಜ್ಯ ಕಂಡಂತಹ ಒಬ್ಬ ಹಿರಿಯ ನಾಯಕರು ಮತ್ತು ರಾಜಕಾರಣಿಗಳು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರು ಹಾಸನದ ರಾಜಕಾರಣದಲ್ಲಿ, ಬಹಳ ಕೆಳಹಂತದಿಂದ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ, ಅಲ್ಲಿಂದ ಸಹಕಾರಿ ಕ್ಷೇತ್ರದಲ್ಲಿ, ತಾಲ್ಲೂಕು ಪಂಚಾಯಿತಿ, ನಂತರ Marketing Federation ನ ಅಧ್ಯಕ್ಷರಾದರು. ಆನಂತರ ಮಾನ್ಯ ದೇವರಾಜು ಅರಸುರವರ ಸರ್ಕಾರದಲ್ಲಿ ಸಚಿವರಾಗಿ ಕೆಲಸ ಮಾಡಿದರು. ಮಾನ್ಯ ಗುಂಡೂರಾವ್‌ರವರ ಸರ್ಕಾರದಲ್ಲಿ ಕೆಲಸ ಮಾಡಿದರು. ಆನಂತರ ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರದಲ್ಲಿ ಕಂದಾಯ ಸಚಿವರಾಗಿದ್ದರು, ಲೋಕಸಭಾ ಸದಸ್ಯರಾಗಿದ್ದರು ಮತ್ತು ವಿಶೇಷವಾಗಿ ಆದಿಚುಂಚನಗಿರಿ ಮಠಕ್ಕೆ ಬೇಕಾದಷ್ಟು ವಿದ್ಯಾ ಕ್ಷೇತ್ರಕ್ಕೆ ಅನುಕೂಲವಾಗಲಿ ಎಂದು ಮಠಕ್ಕೆ ಸಾಕಷ್ಟು ಸಹಾಯವನ್ನು ಮಾಡಿದವರು ಮಾನ್ಯ ಶ್ರೀಕಂಠಯ್ಯನವರು. ಅನೇಕ ವಿದ್ಯಾಸಂಸ್ಥೆಗಳ ಮೂಲಕ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂದು ಸ್ವಾಮೀಜಿಯವರ ಜೊತೆ ಸೇರಿ ಅವರಿಗೆ ಸಿಗುವಂತಹ ಅನೇಕ ಸಂಸ್ಥೆಗಳನ್ನು ಸ್ವಾಮೀಜಿಯವರ ಹೆಸರಿನಲ್ಲಿಯೇ ಮಾಡಿಸಿಕೊಟ್ಟಂತಹ ಕೆಲಸವನ್ನು ಮಾಡಿದಂಥವರು ಮಾನ್ಯ ಶ್ರೀಕಂಠಯ್ಯನವರು. ಈಗಾಗಲೇ ಮಾನ್ಯ ಪ್ರತಿಪಕ್ಷದ ನಾಯಕರು ಮತ್ತು ಅನೇಕ ಸದಸ್ಯರು ವ್ಯಕ್ತಪಡಿಸಿದ ರೀತಿ ಅವರು ನಾವೆಲ್ಲರೂ 'ಅಣ್ಣಯ್ಯ' 'ಅಜಾತಶತ್ರು' ಎಂದು ಕರೆಯುವಂತಹ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದರು. ಅವರು ದ್ವೇಷದ ರಾಜಕಾರಣವನ್ನು ಎಂದೂ ಮಾಡಿರಲಿಲ್ಲ. ನಾನು 1978ರಿಂದ ಅವರ ಜೊತೆಯಲ್ಲಿ ಕೆಲಸ ಮಾಡಿದೆ. ಮೊನ್ನೆ 2005ರವರೆಗೂ ನಾವು ಕೆಲಸ ಮಾಡಿದಂಥದ್ದು, ಯಾವತ್ತೂ ಅವರು ಸ್ನೇಹದಿಂದ ರಾಜಕಾರಣ ಮಾಡಿದವರು. ಅವರ ಹತ್ತಿರ ಯಾರೇ ಆಗಲಿ ಹೋದರೆ ಅವರ ಕೆಲಸ ಮಾಡಿಕೊಡುತ್ತಿದ್ದರು. ಇವರು ವಿರೋಧ ಪಕ್ಷ ಅಥವಾ ಪ್ರತಿಪಕ್ಷದವರು ಎಂದಾಗಲಿ, ನಮ್ಮ ಪಕ್ಷದ ನಾಯಕರು ಎನ್ನುವುದರ ಬಗ್ಗೆ ಯಾವತ್ತೂ ಯೋಚನೆ ಮಾಡುತ್ತಾ ಇರಲಿಲ್ಲ. ಸಹಾಯ ಮಾಡುವಂತಹ ಹಸ್ತ ಮತ್ತು ಎಲ್ಲರನ್ನೂ ಪ್ರೀತಿಯಿಂದ ಕಾಣುವಂಥದ್ದು, ಸ್ನೇಹದಿಂದ ಕಾಣುವ ವ್ಯಕ್ತಿತ್ವವನ್ನು ಬೆಳೆಸಿಕೊಂಡಂಥವರು. ವಿಶೇಷವಾಗಿ, ಹಾಸನ ಜಿಲ್ಲೆಯ ಅಭಿವೃದ್ಧಿ ಮಾಡಬೇಕೆನ್ನುವ ಹೆಚ್ಚು ಆಸೆಯನ್ನು ಇಟ್ಟುಕೊಂಡು, ರೈತರ ಅಭಿವೃದ್ಧಿಯಾಗಬೇಕು, ನೀರಾವರಿ ಸೌಲಭ್ಯವನ್ನು ಕಲ್ಪಿಸಬೇಕು, ಶಿಕ್ಷಣ

ಕ್ಷೇತ್ರದಲ್ಲಿ ಚೆನ್ನಾಗಿ ಆಗಬೇಕು ಎನ್ನುವ ದಿಸೆಯಲ್ಲಿ ಅವರ ಕೆಲಸದ ಉದ್ದೇಶವಾಗಿತ್ತು. ಆ ರೀತಿಯಲ್ಲಿ ಅವರು 50 ವರ್ಷಗಳಿಗೂ ಹೆಚ್ಚು ಈ ರಾಜ್ಯದಲ್ಲಿ ಅವರು ದೀರ್ಘ ಕಾಲ ರಾಜಕಾರಣದಲ್ಲಿ ಮತ್ತು ನಮ್ಮ ಸಮಾಜದಲ್ಲಿ ಹಿರಿಯ ನಾಯಕರಾಗಿ ಕೆಲಸ ಮಾಡಿದಂತಹ ಒಬ್ಬ ಧೀಮಂತ ನಾಯಕರು. ಲೋಕಸಭಾ ಸದಸ್ಯರಾಗಿ, ವಿಧಾನಪರಿಷತ್ತಿನ ಸದಸ್ಯರಾಗಿ ಕೆಲಸ ಮಾಡಿದ್ದರು. ದೀರ್ಘಕಾಲದ ಸೇವೆಯನ್ನು ಈ ಜನಸೇವೆಯಲ್ಲಿ ಮಾನ್ಯ ಹೆಚ್.ಸಿ.ಶ್ರೀಕಂಠಯ್ಯನವರು ತೊಡಗಿಸಿಕೊಂಡಿದ್ದರು. ಅವರು ನಮ್ಮ ಸಂಬಂಧಿಕರೂ ಸಹ ಆಗಿದ್ದರು. ಅವರ ಕಡೇ ದಿನಗಳಲ್ಲಿ ಇತ್ತೀಚೆಗೆ ಸುಮಾರು 5–6 ತಿಂಗಳಿನಿಂದ, ಸ್ವಲ್ಪ ಆರೋಗ್ಯ ಅವರಿಗೆ ಕೈಕೊಟ್ಟಿತು. ಅವರ ವಯಸ್ಸಿನ ವಯೋಮಿತಿಯಲ್ಲಿ ಅವರಿಗೆ ಆರೋಗ್ಯ ಸ್ವಲ್ಪ ಕೈಕೊಟ್ಟ ನಂತರ ಅವರು ಮೊನ್ನೆ ನಿಧನರಾದರು. ಈ ಸಂದರ್ಭದಲ್ಲಿ ಒಬ್ಬ ಹಿರಿಯ ನಾಯಕರು ನಮ್ಮಿಂದ ಅಗಲಿದ್ದಾರೆಂದು ಅಂದುಕೊಂಡಿದ್ದೇನೆ. ಹಾಸನ ಜಿಲ್ಲೆಯ ಬಗ್ಗೆ ಹೇಳಬೇಕೆಂದರೆ, ಒಬ್ಬ ಹಿರಿಯ ನಾಯಕನನ್ನು ಕಳೆದುಕೊಂಡು ಅನಾಥವಾಯಿತು ಎಂದು ಹೇಳಬೇಕಾಗುತ್ತದೆ. ಅದರ ಜೊತೆಗೆ ಸಹಕಾರಿ ಧುರೀಣರು ಇವತ್ತು ನಮ್ಮಿಂದ ಕಣ್ಮರೆಯಾಗಿದ್ದಾರೆ ಎಂದೂ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಒಬ್ಬ ಹಿರಿಯ ನಾಯಕರು ನಮ್ಮಿಂದ ದೂರವಾಗಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ನಾವು ಹೇಳುವಂಥದ್ದು, ಅವರ ಆತ್ಮಕ್ಕೆ ಶಾಂತಿ ಕೋರುವಂಥದ್ದು, ದೊಡ್ಡ ಸ್ನೇಹ ಬಳಗ ಇರುವ ವ್ಯಕ್ತಿತ್ವ ಇದ್ದಂಥವರು. ಅವರೆಲ್ಲರಿಗೂ ಅಗಲಿದ ನಾಯಕನ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲಿ ಎಂದು ಈ ಸಂದರ್ಭದಲ್ಲಿ ತಾವು ತಂದಿರುವ ಸಂತಾಪ ಸೂಚನೆಗೆ ಬೆಂಬಲವನ್ನು ಸೂಚಿಸಿ, ಜೊತೆಗೆ ನಾವು ಕಂಡರಿಯದ ಏನು ಪತ್ರಿಕೆಗಳಲ್ಲಿ ಓದಿದ್ದು, ಒಂದು ಅನಿರೀಕ್ಷಿತ ಘಟನೆ ವಿಶ್ವದಲ್ಲಿ, ಜಪಾನಿನ ಟೋಕಿಯೋದಲ್ಲಿ ಆದಂಥದ್ದು, ಸುಮಾರು 1924ರಲ್ಲಿ ಆದಂತಹ ಘಟನೆ ಎಂದು ಹೇಳಿದ್ದರು ಆದರೆ ರಿಕ್ಟರ್‌ಮಾಪನದ ಲೆಕ್ಕ ತೆಗೆದುಕೊಂಡರೆ 8.9 ಮತ್ತು ಸುನಾಮಿ, ಇವೆರಡೂ ದುರಂತದಲ್ಲಿ ದಿನೇ ದಿನೇ ಮಡಿದಂಥವರ ಸಂಖ್ಯೆ ಪತ್ರಿಕೆಗಳಲ್ಲಿ ಇಂದು ಓದಿದಾಗ ಸುಮಾರು 10,000 ಜನ ಎಂದು ಹೇಳಿದ್ದಾರೆ. ಆ ದೃಶ್ಯವನ್ನು ನೋಡುತ್ತಿದ್ದರೆ ಲಕ್ಷಾಂತರ ಸಂಖ್ಯೆಯಲ್ಲಿ ಮಡಿದಂಥವರು ಕಾಣುತ್ತಿದ್ದಾರೆ. ಅದರ ಜೊತೆಗೆ

ಮನೆಗಳು, ವಿಮಾನಗಳು, ಕಾರುಗಳು ಎಲ್ಲಾ ಸಮುದ್ರದ ಪಾಲಾಗಿವೆ. ಈ ಎರಡೂ ಆಗಿರುವಂಥ ದುರ್ಘಟನೆ ಎಲ್ಲೂ ಆಗಿಲ್ಲವೆಂದು ನಾವು ಅಂದುಕೊಂಡಿದ್ದೇವೆ. ನಾವು ಸುನಾಮಿ ಎಂದು ಕೇಳಿದ್ದೆವು. ನಾವು ಭಾರತದಲ್ಲಿ ಆದಂತಹ ಸುನಾಮಿಯನ್ನು ಜ್ಞಾಪಿಸಿಕೊಂಡಾಗ ಆಗ ಸುನಾಮಿ ಎಂದು ತಿಳಿಯಿತು. ಆನಂತರ ಇವತ್ತು ಜಪಾನಿನಲ್ಲಿ ಆದಂತಹ ದೊಡ್ಡ ಸುನಾಮಿ. ಜಪಾನನ್ನು ಸಾಮಾನ್ಯವಾಗಿ ಭೂಕಂಪನವಾಗುವ ದೇಶವೆಂದು ಹೇಳುತ್ತಾರೆ. ಆದರೆ ಈಗ ಆಗಿರತಕ್ಕಂಥದ್ದು ಬಹಳ ದೊಡ್ಡ ದುರ್ಘಟನೆ. ಅನಿಲ ಸ್ಥಾವರಗಳಿಗೂ ಏನಾದರೂ ತೊಂದರೆಯಾದರೆ ಸೋರುವಿಕೆಯಿಂದ ಇನ್ನೂ ಹೆಚ್ಚು ಅಪಘಾತಗಳು ಆಗುತ್ತವೆ ಎಂದು ಹೇಳುತ್ತಿದ್ದಾರೆ. ಆ ದೃಷ್ಟಿಯಲ್ಲಿ ಅನೇಕ ದೇಶಗಳು ಇವತ್ತು ಆ ದೇಶದ ನೆರವಿಗೆ ಸ್ನೇಹಹಸ್ತ ನೀಡಿದ್ದಾರೆ. ಭಾರತ ಕೂಡ ಸ್ನೇಹ ಹಸ್ತವನ್ನು ನೀಡುತ್ತಿದೆ. ಕಷ್ಟದಲ್ಲಿರುವವರಿಗೆ ಸಹಾಯ ನೀಡಬೇಕೆಂದು ಆ ದೃಷ್ಟಿಯಲ್ಲಿ ಇವತ್ತು ಎರಡು ಸಂತಾಪ ಸೂಚನೆಗಳು ಏನಿವೆ, ಮೊದಲು ತಂದಿರುವ ಮಾನ್ಯ ಶ್ರೀಕಂಠಯ್ಯನವರು ನಿಧನವಾಗಿರುವಂಥದ್ದು, ಜೊತೆಗೆ ಜಪಾನಿನಲ್ಲಿ ಆದಂತಹ ಈ ಘೋರ ಘಟನೆ 'ದುರ್ಘಟನೆ' ಎಂದು ನಾವು ಹೇಳಬಹುದು. ಎರಡಕ್ಕೂ ಈ ಸಂದರ್ಭದಲ್ಲಿ ನಾವು ಸಂತಾಪವನ್ನು ಸೂಚಿಸಿ, ಅಲ್ಲಿ ಮಡಿದಂಥವರಿಗೆ, ಜಪಾನಿನ ಪ್ರಧಾನಿಗಳಾಗಬಹುದು, ಟೋಕಿಯೋ, ಜಪಾನಿನಲ್ಲಿ ನಿರ್ವಹಿಸುವಂತಹ ಕಾರ್ಯಕ್ಕೆ ನಾವು ಸಹಾಯ ಹಸ್ತವನ್ನು ನೀಡಬೇಕು. ಮಡಿದಂಥವರಿಗೆ ನಾವು ಸಂತಾಪ ಸೂಚಿಸುವಂತಹ ಕಾರ್ಯವನ್ನು ಮಾಡುವುದು ಸೂಕ್ತ ಎಂದು ಈ ಸಂದರ್ಭದಲ್ಲಿ ತಿಳಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ.

Sri Qamarul Islam (Gulbarga North) : ಮಾನ್ಯ ಅಧ್ಯಕ್ಷರೆ, itwill be highly an injustice, if I don't quote an incident of 1978. ನಾನು 1978ರಲ್ಲಿ first time ಗುಲ್ಬರ್ಗಾದಿಂದ MLA ಆಗಿದ್ದೆ. ಆ ಕಾಲದಲ್ಲಿ ಜನತಾ ಪಾರ್ಟಿಯಲ್ಲಿ about 60 MLAs were there. At that time Sri Srikanthaiah ji was the Minister in Sri Devaraj Urs's Ministry. There was scarcity in Gulbarga.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಕನ್ನಡದಲ್ಲಿ ಮಾತನಾಡಲು ಸೂಚಿಸಿ :

ಅಧ್ಯಕ್ಷರು : ಅವರು ಮಾತನಾಡಲಿ please.

ಶ್ರೀ ಖಮರುಲ್ ಇಸ್ಲಾಂ : ಹೀಗೆ ಮಾಡಿದರೆ ನಿಮಗೆ ಶಾಂತಿಯಾಗುತ್ತದೆಯೇ ? ನಮ್ಮ feelings ಅನ್ನು ಹೇಳಬೇಕು.

ಅಧ್ಯಕ್ಷರು : ತಾವು ಮಾತನಾಡಿ.

(ಗೊಂದಲ)

ಅಧ್ಯಕ್ಷರು : ಸಂತಾಪ ಸೂಚನೆ ಬಗ್ಗೆ ಅವರು ಮಾತನಾಡುತ್ತಿದ್ದಾರೆ, ಮಾತನಾಡಲಿ please.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಇದೇನು ಸದನವೇ? ವಾಕ್ ಮಾಡಿಕೊಂಡು ಕನ್ನಡದಲ್ಲಿ ಮಾತನಾಡಿ ಎಂದು ಹೇಳುತ್ತಾರೆ. ಅವರು ತಮ್ಮ ಸೀಟ್‌ನಲ್ಲಿ ನಿಂತುಕೊಂಡು ಹೇಳಿದರೆ ಪರವಾಗಿಲ್ಲ. ಒಂದು ಸಭಾ ಗಾಂಭೀರ್ಯವೇ ಇಲ್ಲ. ಅಂತಹವರನ್ನೆಲ್ಲ ಸದನದಲ್ಲಿ ...

(ಗೊಂದಲ)

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) : ಸನ್ಮಾನ್ಯ ಸಭಾಧ್ಯಕ್ಷರೆ, ಸಂತಾಪ ಸೂಚನೆ ನಡೆದಿದೆ. ಇಂತಹ ಸಂದರ್ಭದಲ್ಲಿ ಯಾರಾದರೂ ಈ ತರಹ comments ಮಾಡುತ್ತಾರೆಯೇ? ಸ್ವಲ್ಪ ತಿಳಿದುಕೊಳ್ಳಬೇಕು. ನಾವು ಸದಸ್ಯರಾಗಿಯೇ ಇಲ್ಲಿಗೆ ಬಂದಿದ್ದೇವೆ.

ಶ್ರೀ ಖಮರುಲ್ ಇಸ್ಲಾಂ : ಅವರು ಗುಲ್ಬರ್ಗಾಕ್ಕೆ ಬಂದಿದ್ದರು. ಬಂದ ಮೇಲೆ all political party meeting ಒಂದನ್ನು ಕರೆಯುತ್ತಾರೆ. ನಾನು ಮುಸ್ಲಿಂ ಲೀಗ್ ಪಕ್ಷದಿಂದ ಒಬ್ಬನೇ ಎಂ.ಎಲ್.ಎ., Opposition ನಲ್ಲಿದ್ದೆ. ನಾನು ಆ meeting attend ಮಾಡಿದ ಮೇಲೆ, ಆ ಐವಾನ್-ಇ-ಶಾಹಿಯಲ್ಲಿ ಬಹಳ ಕೆಟ್ಟ ಗಲಾಟೆಯಾಗಿದೆ. All benches and everything in this building were demaged and there was a criminal case against those MLAs. ಆ ಸಮಯದಲ್ಲಿ ನಾನು ವಿರೋಧ ಪಕ್ಷದವರ ಜೊತೆಯಲ್ಲಿ ಸೇರಿ, ಹೌದಪ್ಪಾ, ವಿರೋಧ ಮಾಡುವುದು ವಿರೋಧ ಪಕ್ಷದವರ

ಕರ್ತವ್ಯವಾಗಿರುತ್ತದೆ, ಆದ್ದರಿಂದ ವಿರೋಧ ಮಾಡಬೇಕು ಎಂದು ಹೇಳಿದೆ. Then he called me, ಈ ಇನ್ಸಿಡೆಂಟ್ ಆದ ಮೇಲೆ ಐವಾನ್-ಇ-ಶಾಹಿಗೆ ಕರೆದರು. ಶ್ರೀಕಂಠಯ್ಯನವರು ಹೇಳಿದರು, ಖಮರುಲ್ ಇನ್ನೂ ನಿಮ್ಮ ಮದುವೆ ಆಗಿಲ್ಲ. ಹೌದು ಸಾರ್ ಎಂದರೆ, ನೀವು ಬಹಳ young ನೀವು ಮೊದಲ ಬಾರಿಗೆ ಗೆದ್ದಿದ್ದೀರಿ. ನಿಮ್ಮ problem ಏನಿದೆ ಎಂದು ಕೇಳಿದರು. ಅದಕ್ಕೆ ನಾನು, ಸರ್ ನಮ್ಮ constituency ನಲ್ಲಿ ಜನರಿಗೆ ನೀರಿಲ್ಲ ಎಂದು ಹೇಳಿದೆ. ಶ್ರೀ ಕೆಂಚಾರೆಡ್ಡಿ, ಎನ್ನುವ Executive Engineer ಇದ್ದರು ಎಂದು ನನ್ನ ನೆನಪು. ಅವರನ್ನು ನಾನು ಇವತ್ತು ನೆನಪಿಸಿಕೊಳ್ಳುತ್ತೇನೆ. He told me "you are like my son. This Executive Engineer is there. How many bore-wells you want, he will drill in your Constituency. There are three machines." Sir, I cannot forget, in 10 days I drilled 50 bore-wells in my constituency. For each three inch water was there. Then, at that time political Tsunami among Janata Party and Congress party started and it was there for 8 days. Then they came to an understanding. By that time, ನನ್ನ ಕೆಲಸ ಮುಗಿಯಿತು, ಎಲ್ಲರಿಗೂ ನೀರು ಸಿಕ್ಕಿದೆ. He was such a great man. Now I am here for 30 years. That was the success of my first year of the political life because of such a minister. What was there in his heart, it came from his mouth and whenever I got an opportunity to work under Sri S.M. Krishna's Cabinte. I was the Minister of Housing and he was the minister of Revenue. Whenever, he used to contest, I used to go for campaign. Today he is no more. He was a very great person. God, place his soul in rest and I pray almighty that the peace be given, peace may be given to his wife and children.

Another thing; in Japan, the Scientists predicted 19 moon will be of its biggest size, some thing may happen within one or two weeks. Unfortunately it has happened. The episode of that earthquake was in the sea. It is the highest i.e., 8.9. Nowhere in the history such a

highest rector is called. Earthquake and the tsunami. The third thing is Nuclear Energy, everybody wanted for us. But, unfortunately, apart from the damages and the killings, because of the Tsunami as well as the earthquake. The effect is because of the nuclear reactors. Not only one, another two are not working. Even the coolant is not reducing the heat, which has been generated. We are thankful to our Sri Manmohan Singh Government for coming forward to send the first ship load of very good blankets to them. Whatever is needed from our side. I hope that they will be given to that country. That country is always a developed country and if friendly with all our feelings and our sympathy is always there, with them. We pray Almighty to give courage to face this difficult situation. Thank you.

ಶ್ರೀ ಎ. ಮಂಜು (ಅರಕಲಗೂಡು) : ಮಾನ್ಯ ಸಭಾಧ್ಯಕ್ಷರೆ, ಈ ಸಂತಾಪ ಸೂಚನೆಯಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಹಲವಾರು ಮಂತ್ರಿಗಳು ಮಾತನಾಡಿದ್ದಾರೆ. ಹಿರಿಯ ರಾಜಕಾರಣಿ, ಮುತ್ಸದ್ದಿ ರಾಜಕಾರಣಿ, ಅಜಾತ ಶತ್ರು ಮತ್ತು ಅಣ್ಣಯ್ಯ ಎಂದು ಹೆಸರನ್ನು ಪಡೆದಿರತಕ್ಕಂತ ಶ್ರೀಕಂಠಯ್ಯನವರ ಬಗ್ಗೆ, ಅವರು ಮಾಡಿದಂತಹ ಸಾಧನೆಗಳ ಬಗ್ಗೆ ಎಲ್ಲರ ಮನಸ್ಸಿಗೆ ನಾಟುವ ರೀತಿಯಲ್ಲಿ ಪ್ರತಿಯೊಬ್ಬರೂ ಕೂಡ ಮಾತನಾಡಿದ್ದಾರೆ. ನಾನೂ ಕೂಡ ಶ್ರೀಕಂಠಯ್ಯನವರನ್ನು ಹತ್ತಿರದಿಂದ ನೋಡಿದಾಗ ಅವರು ಯಾರ ಬಗ್ಗೆಯೂ ಕೂಡ ಸೇಡಿನ ರಾಜಕಾರಣ ಮಾಡಿದಂತಹ ವ್ಯಕ್ತಿಯಲ್ಲ. ನಾನೂ ಕೂಡ ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿದ್ದಾಗ, 1989ನೇ ಇಸವಿಯಲ್ಲಿ ನನಗೆ ಸೀಟು ಸಿಕ್ಕಿರಲಿಲ್ಲ. ಅವರು ಸೀಟು ತಪ್ಪಿಸುವುದರಲ್ಲಿ ಮೊದಲನೆಯವರಾಗಿದ್ದರು. ಆದರೂ ಕೂಡ ನನ್ನನ್ನು ಕರೆದು 1991ನೇ ಇಸವಿಯ ಒಂದು ಸಂದರ್ಭದಲ್ಲಿ ಮಾತನಾಡಿದಂತಹ ಮಾತನ್ನು ನಾನು ಇವತ್ತು ನೆನೆಸಿಕೊಳ್ಳಬೇಕಾಗುತ್ತದೆ. ನಾನವತ್ತು ಮಾಡಿದಂತಹ ತಪ್ಪಿನಿಂದ ನಿಮಗೆ ಅವತ್ತು ಸೀಟು ತಪ್ಪಿ ಹೋಯಿತು. ಆದರೆ ಮುಂದಿನ ದಿನಗಳಲ್ಲಿ ನಾನು ನಿನಗೆ ರಾಜಕೀಯವಾಗಿ ಸಹಾಯ ಮಾಡುತ್ತೇನೆ ಎಂದು ಹೇಳಿರುವುದನ್ನು ನಾನು ನೆನೆಸಿಕೊಂಡು, ಅವರು

ಬಂದಂಥಹ ಅವಧಿಯಲ್ಲಿ ನನಗೆ ಅವರದ್ದೇ ಆದಂತಹ ಧಾಟಿಯಲ್ಲಿ ರಾಜಕೀಯವಾಗಿ ನನಗೆ ಸಹಾಯವನ್ನು ಮಾಡಿದ್ದರು. ಬಹುಶಃ ಹಾಸನ ಜಿಲ್ಲೆಯಲ್ಲಿ ಅವರು ಮಾಡಿದಂತಹ ಅಪಾರವಾದ ಅಭಿವೃದ್ಧಿ ಕಾರ್ಯಗಳು, ಹಾಸನ ಜಿಲ್ಲೆಗೆ ಹೇಮಾವತಿ ಸಕ್ಕರೆ ಕಾರ್ಖಾನೆ ಕೊಟ್ಟಂತಹ ಕೀರ್ತಿ ಅವರಿಗೆ ಸೇರತಕ್ಕಂಥದ್ದು. ಕಳೆದ ಸಾಲಿನಲ್ಲಿ 1999–2004ರವರೆಗೆ ಕಂದಾಯ ಸಚಿವರಾಗಿದ್ದಾಗ ನಾಡ ಕಛೇರಿಯನ್ನು ಸ್ಥಾಪನೆ ಮಾಡುವುದರ ಮುಖಾಂತರ ಬಡ ಜನರಿಗೆ ಗಣಕೀಕೃತ ಪಹಣಿಯನ್ನು ಸಿಗುವಂತಹ ವ್ಯವಸ್ಥೆಯನ್ನು ಮಾಡಿದಂತಹ ಸಚಿವರು ಅಂತ ಹೇಳಿದರೆ ಶ್ರೀಮಾನ್ ಶ್ರೀಕಂಠಯ್ಯನವರು ಎಂದು ನಾವು ತಿಳಿದುಕೊಳ್ಳಬೇಕು. ಎಲ್ಲರೂ ಕೂಡ ಮಾತನಾಡುತ್ತಾ ಹೇಳಿದರು, ಶ್ರೀಕಂಠಯ್ಯನವರು ಬಾರೀ ಪಕ್ಷಾತೀತವಾಗಿ, ಪ್ರತಿಯೊಬ್ಬರನ್ನು ಹತ್ತಿರದಿಂದ ಗೌರವಿಸಿ ಮಾತನಾಡತಕ್ಕಂಥದ್ದನ್ನು ಈಗ ನಮ್ಮ ಶ್ರೀ ಜಗದೀಶ್ ಶೆಟ್ಟರ್ ಅವರು ಮಾತನಾಡುತ್ತಾ ಹೇಳಿದರು. ಅವರಿಗೆ ಸ್ಟೇಡಿಯಂ ಕೊಟ್ಟರು, ಆದರೆ ಇನ್ನೂ ಓಪನ್ ಆಗಿಲ್ಲ. ಅದರ ಬಗ್ಗೆ ನಾವು ಅವರನ್ನು ಕರೆದು ಮಾಡಬೇಕು. ಅವರು ಮಾಡಿದಂತಹ ಸೇವೆಯನ್ನು ನಾವು ನೆನೆಸಿಕೊಂಡು ಅವರ ಹೆಸರನ್ನು ಈ ರಾಜ್ಯದಲ್ಲಿನ ಒಂದು ಸ್ಟೇಡಿಯಂಗೆ ಇಡುವಂತಹ ವ್ಯವಸ್ಥೆಯನ್ನು ಮಾಡಿದರೆ ನಿಜವಾಗಲೂ ಕೂಡ ಸಾರ್ಥಕವಾಗುತ್ತದೆ ಎನ್ನುವುದನ್ನು ನಾನು ಈ ಸದನದ ಮೂಲಕ ಅ ಮಂತ್ರಿಗಳಿಗೆ ನಾನು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಜೊತೆಗೆ ಈ ಸೇಡಿನ ರಾಜಕಾರಣ ಬಿಟ್ಟಂತಹ ವ್ಯಕ್ತಿ ಎಂದು ಹೇಳಿದಾಗ ಈಗಿರತಕ್ಕಂತಹ ನಾವುಗಳು ಎಲ್ಲರೂ ಸಚಿವರನ್ನೂ ಸೇರಿಸಿಕೊಂಡು ಅವರನ್ನು ಆದರ್ಶವಾಗಿಟ್ಟುಕೊಂಡು ಅವರು ಮಾಡಿದಂತಹ ಜಾತ್ಯಾತೀತವಾಗಿ, ಪಕ್ಷಾತೀತವಾಗಿ ಮಾಡಿದಂತಹ ಸಾಧನೆಗಳನ್ನು ನೋಡಬೇಕು. ನೋಡಿಕೊಂಡು ಇಲ್ಲಿರತಕ್ಕಂತಹ ಎಲ್ಲರಿಗೂ ಕೂಡ ಈ ಸಂತಾಪ ಸೂಚನೆ ಸಿಗುವಂತಹ ಅವಕಾಶ. ಯಾರು ಬಂದು ಯಾರ ಪರವಾಗಿ ಮಾತನಾಡುತ್ತಾರೋ ಗೊತ್ತಿಲ್ಲ. ನಾವಿದ್ದಾಗಲಾದರೂ ಕೂಡ ಅವರು ಇದ್ದ ರೀತಿಯಲ್ಲಿ ನಾವು ನಡೆದುಕೊಳ್ಳುವ ವ್ಯವಸ್ಥೆ ಮಾಡಿದಾಗ ಮಾತ್ರ ಅವರಿಗೆ ಶಾಂತಿ ಸಿಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರ ಕುಟುಂಬ ವರ್ಗದವರು ಯಾರಿಗಾದರೂ ವೈಯಕ್ತಿಕವಾದ ಸಮಸ್ಯೆಗಳು ಸರ್ಕಾರದ ಮುಖಾಂತರ ಬಂದರೆ,

ಸರ್ಕಾರದವರು ಆ ಸಮಸ್ಯೆಗಳಿಗೆ ಸ್ಪಂದಿಸಿ ಅವರಿಗೆ ಆಶ್ರಯ ಆಗಬೇಕು ಎಂದು ಈ ಸಂದರ್ಭದಲ್ಲಿ ಹೇಳಿ ತಾವು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ (ಬೇಲೂರು): ಮಾನ್ಯ ಅಧ್ಯಕ್ಷರೆ, ನಮ್ಮ ಹಾಸನ ಜಿಲ್ಲೆಯವರೇ ಆದಂತಹ ಶ್ರೀ ಹೆಚ್.ಸಿ. ಶ್ರೀಕಂಠಯ್ಯನವರು ಇವತ್ತು ನಮ್ಮ ಮುಂದೆ ಇಲ್ಲ. ನಿಜವಾಗಿಯೂ ಸಹ ಅವರು ಒಬ್ಬರು ಹಿರಿಯ ರಾಜಕಾರಿಣಿ. ನಮ್ಮ ಹಾಸನ ಜಿಲ್ಲೆಯಲ್ಲಿ ಅವರು ಒಳ್ಳೆಯ ಹೆಸರನ್ನು ಗಳಿಸಿದ್ದರು. ಮತ್ತು ಅವರು ರಾಜಕಾರಣವನ್ನು 1950ರಲ್ಲಿ ಪ್ರಾರಂಭ ಮಾಡಿ ಕೆಳ ಹಂತದಿಂದ ತಾಲ್ಲೂಕು ಬೋರ್ಡ್ ಸದಸ್ಯರಾಗಿ, ತಾಲ್ಲೂಕು ಬೋರ್ಡಿನ ಅಧ್ಯಕ್ಷರಾಗಿ, Co–operative field ನಲ್ಲಿ ಸಹ ಅವರು ಒಳ್ಳೆಯ ಸೇವೆಯನ್ನು ಮಾಡಿದ್ದರು. ಚನ್ನರಾಯಪಟ್ಟಣ ಮತ್ತು ಹಾಸನ ಜಿಲ್ಲೆಯಲ್ಲಿ ಇವತ್ತು ಸುಮಾರು 3 ರಿಂದ 4 ಸಾವಿರ ಜನರಿಗೆ ಅಪಾಯಿಂಟ್‌ಮೆಂಟ್ ಕೊಟ್ಟಂತಹ ವ್ಯಕ್ತಿ ಇವರು. ಎಲ್ಲರೂ ಅವರನ್ನು ಅಣ್ಣಯ್ಯ ಎಂದು ಕರೆಯುತ್ತಾರೆ. ನಾವೂ ಸಹ ಅವರನ್ನು 2–3 ತಿಂಗಳಿಗೆ ಒಂದು ಸಾರಿ ಮಾತನಾಡಿಸುವುದಕ್ಕೆ ಹೋದಾಗ ನಗು ಮುಖದಲ್ಲಿ ನಮ್ಮನ್ನು ಮಾತನಾಡಿಸುತ್ತಿದ್ದರು. ಅವರು ಸಿಟ್ಟು ಮಾಡಿಕೊಂಡಿದ್ದು ನಾವು ನೋಡಿಯೇ ಇಲ್ಲ. ಅವರು ಲೋಕಸಭೆ ಸದಸ್ಯರಾಗಿ ಮತ್ತು ವಿಧಾನ ಪರಿಷತ್ತಿನ ಸದಸ್ಯರಾಗಿ ಹಾಗೂ ವಿಧಾನಸಭೆ ಸದಸ್ಯರಾಗಿ ಮಂತ್ರಿಗಳಾಗಿ ಹಲವಾರು ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ. ಅದರಲ್ಲಿಯೂ ಸಹ ಮಾನ್ಯ ಮಂಜುರವರು ಹೇಳಿದ ಹಾಗೆ ಹೇಮಾವತಿ ಸಕ್ಕರೆ ಕಾರ್ಖಾನೆ ಅವರು ಸ್ಥಾಪನೆ ಮಾಡಿದಂತಹ ಒಂದು ಕಾರ್ಖಾನೆ. ಅದರಲ್ಲಿಯೂ ಸಹ ಹಾಸನ ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದಾರೆ. ಆದಿಚುಂಚನಗಿರಿ ಕ್ಷೇತ್ರದ ಸ್ವಾಮೀಜಿಯವರಿಗೆ ಜಮೀನು ಕೊಡಿಸುವುದರಿಂದ ಹಿಡಿದು ಹಲವಾರು ಇವತ್ತು ನಮಗೆ 50 ಎಕರೆ ಭೂಮಿಯಲ್ಲಿ ಅಲ್ಲಿ ಆಸ್ಪತ್ರೆ ನಿರ್ಮಾಣ ಮಾಡಿದ್ದರಲ್ಲಿಯೂ ಸಹ ಅವರ ಪಾತ್ರ ಇದೆ. ಅವರ ಸೇವೆ ಇದೆ ಎನ್ನುವ ಅಂಶವನ್ನು ಹೇಳುತ್ತಾ ಜೊತೆಗೆ ಇವತ್ತು ಅವರ ಆತ್ಮಕ್ಕೆ ಭಗವಂತ ಶಾಂತಿಯನ್ನು ಕೊಡಲಿ ಮತ್ತು ಅವರ ಮನೆಯವರಿಗೆ ಹಾಗೂ ಅವರ ಕುಟುಂಬದವರಿಗೆ ನೋವನ್ನು ಭರಿಸತಕ್ಕಂತಹ ಶಕ್ತಿಯನ್ನು ಕೊಡಲಿ ಎನ್ನುವ ಅಂಶವನ್ನು ಹೇಳುತ್ತಾ ನಾವು

ಯಾರೂ ನಿರೀಕ್ಷೆ ಮಾಡಿರಲಿಲ್ಲ, ಜಪಾನ್‌ನಲ್ಲಿ ಭೂಕಂಪ ಮತ್ತು ಸುನಾಮಿ ಆಗುತ್ತದೆ ಎಂದು ಹಾಗಾಗಿ ಇವತ್ತು ಜಪಾನ್‌ನಲ್ಲಿ ಆಗಿರತಕ್ಕಂತಹ ದುರಂತ ನಮಗೆಲ್ಲರಿಗೂ ಸಹ ನೋವನ್ನು ಉಂಟು ಮಾಡಿದೆ. ಹೆಚ್ಚು ಕಡಿಮೆ ಎಷ್ಟು ಎಂದು ನಾವು ನಿಖರವಾಗಿ ಹೇಳುವುದಕ್ಕಾಗುವುದಿಲ್ಲ. 12,000 ಜನ ಎಂದು ಹೇಳುತ್ತಾರೆ, ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಜನ ಸತ್ತಿದ್ದಾರೆ. ಅಪಾರವಾದ ನಷ್ಟವಾಗಿದೆ ಹಾಗಾಗಿ ನಾವು ಇವತ್ತು ಇಲ್ಲಿ ಮಾತನಾಡುತ್ತಾ ಹೇಳಿದರು, ಮನುಷ್ಯನ ಶಕ್ತಿಗಿಂತ ದೊಡ್ಡ ಶಕ್ತಿ ಇದೆ. ಅದು ಎಲ್ಲವನ್ನು ಕಂಟ್ರೋಲ್ ಮಾಡುತ್ತದೆ ಎಂದು ಹೇಳಿದರು. ನಿಜವಾಗಿಯೂ ಅದು ಹಾಗೆ ಅನ್ನಿಸುತ್ತದೆ. ಹಾಗಾಗಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಜಪಾನಿನ ಇತಿಹಾಸದಲ್ಲಿಯೇ ಭೀಕರ ಭೂಕಂಪ ಹಾಗೂ ಹೊರ ಹೊಮ್ಮಿರುವ ಪ್ರಬಲ ಸುನಾಮಿಯಲ್ಲಿ, ಅಲ್ಲದೇ ಇದರ ಬೆನ್ನಲ್ಲೇ ಅಣುಸ್ಥಾವರ ಸ್ಫೋಟಗೊಂಡು ಸಾವಿರಾರು ಜನರು ಮೃತಗೊಂಡು ನಿರ್ಗತಿಕರಾಗಿರುವುದಲ್ಲದೇ ದೇಶಕ್ಕೆ ಅಪಾರ ಆಸ್ತಿ ಪಾಸ್ತಿ ನಷ್ಟವುಂಟಾಗಿರುತ್ತದೆ. ಈ ಒಂದು ದುರ್ಘಟನೆಯಿಂದ ಜಪಾನ್ ದೇಶವು ಹಾಗೂ ಅಲ್ಲಿಯ ಜನರು ಶೀಘ್ರ ಚೇತರಿಸಿಕೊಳ್ಳಲೆಂದು ನಾವೆಲ್ಲರೂ ಹಾರೈಸೋಣ. ಮೃತರ ಗೌರವಾರ್ಥ ಒಂದು ನಿಮಿಷ ಮೌನ ಆಚರಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

(ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.